SHIKARAT.COM

## KARNATAKA TEACHERS ELIGIBILITY TEST-2023

### PAPER -2 : PART- I - LANGUAGE-I KEY ANSWERS

| Q. No | Kannada | English | Urdu | Tamil | Telugu | Marathi | Hindi | Sanskrit |
|---|---|---|---|---|---|---|---|---|
| 1 | 1 | 4 | 1 | 2 | 1 | 3 | 4 | 2 |
| 2 | 4 | 1 | 2 | 3 | 2 | 4 | 3 | 3 |
| 3 | 2 | 3 | 4 | 1 | 1 | 2 | 2 | 4 |
| 4 | 3 | 4 | 4 | 3 | 3 | 1 | 1 | 1 |
| 5 | 1 | 4 | 2 | 4 | 2 | 3 | 3 | 2 |
| 6 | 2 | 3 | 1 | 1 | 1 | 4 | 2 | 3 |
| 7 | 4 | 3 | 3 | 2 | 3 | 2 | 3 | 4 |
| 8 | 3 | 1 | 2 | 3 | 4 | 3 | 1 | 1 |
| 9 | 1 | 3 | 4 | 1 | 2 | 1 | 1 | 1 |
| 10 | 3 | 1 | 1 | 3 | 4 | 4 | 4 | 2 |
| 11 | 2 | 2 | 3 | 4 | 3 | 3 | 3 | 3 |
| 12 | 4 | 3 | 1 | 4 | 1 | 1 | 1 | 4 |
| 13 | 2 | 1 | 4 | 3 | 1 | 2 | 1 | 2 |
| 14 | 4 | 3 | 1 | 1 | 2 | 4 | 4 | 3 |
| 15 | 1 | 2 | 4 | 2 | 1 | 3 | 3 | 4 |
| 16 | 2 | 3 | 3 | 2 | 3 | 2 | 3 | 1 |
| 17 | 4 | 1 | 1 | 3 | 2 | 4 | 2 | 2 |
| 18 | 1 | 4 | 2 | 1 | 2 | 3 | 3 | 3 |
| 19 | 3 | 1 | 3 | 2 | 4 | 1 | 3 | 4 |
| 20 | 1 | 3 | 4 | 4 | 1 | 2 | 3 | 3 |
| 21 | 3 | 1 | 1 | 2 | 3 | 4 | 1 | 1 |
| 22 | 2 | 4 | 2 | 1 | 3 | 3 | 1 | 3 |
| 23 | 4 | 1 | 3 | 4 | 1 | 1 | 3 | 2 |
| 24 | 1 | 4 | 4 | 2 | 4 | 2 | 4 | 4 |
| 25 | 3 | 2 | 2 | 3 | 3 | 4 | 4 | 1 |
| 26 | 1 | 1 | 1 | 1 | 4 | 2 | 3 | 4 |
| 27 | 3 | 2 | 3 | 3 | 1 | 1 | 2 | 4 |
| 28 | 2 | 4 | 4 | 4 | 3 | 3 | 4 | 2 |
| 29 | 4 | 1 | 1 | 1 | 4 | 1 | 2 | 2 |
| 30 | 1 | 3 | 3 | 2 | 2 | 2 | 3 | 3 |



SHIKARAT.COM

| KARNATAKA TEACHERS ELIGIBILITY TEST-2023 | | | | | | | | |
|---|---|---|---|---|---|---|---|---|
| PAPER -2 : PART-II - LANGUAGE-II KEY ANSWERS | | | | | | | | |
| Q. No | Kannada | English | Urdu | Tamil | Telugu | Marathi | Hindi | Sanskrit |
| 31 | 2 | 2 | 2 | 3 | 3 | 2 | 3 | 1 |
| 32 | 1 | 3 | 3 | 2 | 2 | 1 | 2 | 2 |
| 33 | 3 | 2 | 1 | 3 | 4 | 3 | 4 | 3 |
| 34 | 4 | 1 | 4 | 1 | 1 | 4 | 2 | 4 |
| 35 | 3 | 3 | 2 | 3 | 4 | 2 | 3 | 1 |
| 36 | 2 | 4 | 3 | 1 | 1 | 1 | 3 | 2 |
| 37 | 3 | 3 | 4 | 2 | 4 | 3 | 4 | 3 |
| 38 | 2 | 1 | 3 | 4 | 4 | 4 | 2 | 4 |
| 39 | 2 | 2 | 2 | 3 | 4 | 2 | 4 | 1 |
| 40 | 4 | 1 | 2 | 2 | 3 | 1 | 1 | 2 |
| 41 | 3 | 4 | 2 | 4 | 2 | 3 | 3 | 3 |
| 42 | 1 | 3 | 3 | 1 | 3 | 2 | 3 | 4 |
| 43 | 3 | 1 | 3 | 3 | 2 | 4 | 4 | 1 |
| 44 | 3 | 4 | 4 | 2 | 4 | 3 | 1 | 2 |
| 45 | 4 | 1 | 4 | 3 | 3 | 2 | 2 | 3 |
| 46 | 2 | 2 | 3 | 1 | 4 | 4 | 2 | 4 |
| 47 | 4 | 3 | 2 | 2 | 3 | 1 | 2 | 1 |
| 48 | 3 | 1 | 3 | 4 | 1 | 2 | 3 | 2 |
| 49 | 2 | 4 | 4 | 1 | 2 | 1 | 4 | 3 |
| 50 | 4 | 2 | 2 | 2 | 3 | 3 | 4 | 4 |
| 51 | 2 | 3 | 1 | 3 | 1 | 2 | 1 | 3 |
| 52 | 4 | 1 | 4 | 1 | 4 | 3 | 3 | 1 |
| 53 | 3 | 2 | 3 | 3 | 1 | 4 | 4 | 4 |
| 54 | 4 | 3 | 1 | 3 | 2 | 4 | 1 | 2 |
| 55 | 4 | 1 | 2 | 4 | 3 | 3 | 4 | 1 |
| 56 | 3 | 4 | 4 | 2 | 2 | 1 | 2 | 2 |
| 57 | 3 | 3 | 2 | 3 | 3 | 4 | 4 | 2 |
| 58 | 3 | 4 | 1 | 4 | 2 | 2 | 4 | 1 |
| 59 | 1 | 1 | 1 | 4 | 4 | 1 | 3 | 3 |
| 60 | 2 | 3 | 4 | 2 | 1 | 3 | 1 | 4 |



SHIKARAT.COM

| KARNATAKA TEACHERS ELIGIBILITY TEST-2023 | | | | | |
|---|---|---|---|---|---|
| Paper-2: Part-III and IV - Child Development & Pedagogy, Mathematics & Science<br>Key Answers (Kannada,English,Urdu,Tamil,Telugu,Marathi and Hindi medium) | | | | | |
| **Q. NO** | **Child Development & Pedagogy** | **Q.NO** | **Mathematics & Science** | **Q.NO** | **Mathematics & Science** |
| **61** | 2 | **91** | 4 | **121** | 4 |
| **62** | 3 | **92** | 1 | **122** | 1 |
| **63** | 4 | **93** | 1 | **123** | 3 |
| **64** | 4 | **94** | 2 | **124** | 1 |
| **65** | 2 | **95** | 1 | **125** | 4 |
| **66** | 1 | **96** | 2 | **126** | 3 |
| **67** | 1 | **97** | 3 | **127** | 3 |
| **68** | 1 | **98** | 1 | **128** | 1 |
| **69** | 4 | **99** | 2 | **129** | 1 |
| **70** | 1 | **100** | 3 | **130** | 2 |
| **71** | 4 | **101** | 3 | **131** | 3 |
| **72** | 3 | **102** | 4 | **132** | 3 |
| **73** | 4 | **103** | 3 | **133** | 4 |
| **74** | 2 | **104** | 4 | **134** | 1 |
| **75** | 3 | **105** | 4 | **135** | 2 |
| **76** | 2 | **106** | 3 | **136** | 4 |
| **77** | 4 | **107** | 2 | **137** | 1 |
| **78** | 2 | **108** | 3 | **138** | 2 |
| **79** | 3 | **109** | 1 | **139** | 3 |
| **80** | 3 | **110** | 3 | **140** | 1 |
| **81** | 1 | **111** | 1 | **141** | 3 |
| **82** | 3 | **112** | 4 | **142** | 2 |
| **83** | 3 | **113** | 2 | **143** | 3 |
| **84** | 3 | **114** | 1 | **144** | 3 |
| **85** | 2 | **115** | 3 | **145** | 1 |
| **86** | 1 | **116** | 4 | **146** | 4 |
| **87** | 3 | **117** | 4 | **147** | 3 |
| **88** | 2 | **118** | 4 | **148** | 3 |
| **89** | 2 | **119** | 2 | **149** | 4 |
| **90** | 3 | **120** | 1 | **150** | 3 |



SHIKARAT.COM

## KARNATAKA TEACHERS ELIGIBILITY TEST-2023

### PAPER-2 : PART-IV Social Science
### (Kannada,English,Urdu,Tamil,Telugu,Marathi and Hindi medium)

| Q.NO | Social Science | Q.NO | Social Science |
|---|---|---|---|
| 91 | 1 | 121 | 2 |
| 92 | 4 | 122 | 1 |
| 93 | 3 | 123 | 3 |
| 94 | 1 | 124 | 4 |
| 95 | 2 | 125 | 2 |
| 96 | 1 | 126 | 3 |
| 97 | 3 | 127 | 2 |
| 98 | 2 | 128 | 3 |
| 99 | 3 | 129 | 4 |
| 100 | 4 | 130 | 1 |
| 101 | 2 | 131 | 3 |
| 102 | 1 | 132 | 4 |
| 103 | 4 | 133 | 1 |
| 104 | 2 | 134 | 2 |
| 105 | 4 | 135 | 3 |
| 106 | 2 | 136 | 2 |
| 107 | 1 | 137 | 3 |
| 108 | 1 | 138 | 2 |
| 109 | 3 | 139 | 3 |
| 110 | 2 | 140 | 1 |
| 111 | 4 | 141 | 3 |
| 112 | 3 | 142 | 2 |
| 113 | 4 | 143 | 1 |
| 114 | 1 | 144 | 2 |
| 115 | 2 | 145 | 4 |
| 116 | 1 | 146 | 2 |
| 117 | 2 | 147 | 3 |
| 118 | 4 | 148 | 3 |
| 119 | 1 | 149 | 4 |
| 120 | 3 | 150 | 3 |



SHIKARAT.COM

SHIKARAT.COM
Online Education

KMSS

Booklet Sl. No.

# QUESTION PAPER BOOKLET – PAPER – II

## (KANNADA MEDIUM SOCIAL SCIENCE ONLY)

**SUBJECTS : Language – I, Language – II, Child Development and Pedagogy, Social Science**

**Maximum Marks : 150** **02.00 P.M. to 04.30 P.M.** **Max. Time : 2.30 Hours**

## INSTRUCTIONS TO THE CANDIDATES (Read Carefully)

**Note: Candidates are instructed to confirm**

- **Whether pre-printed O.M.R. has your name and application number printed on it.**
- **Whether pre-printed O.M.R. Sheet No. and QP Booklet No. are same. If the candidate uses the O.M.R./QP booklet which doesn't belong to him/her, such O.M.R. sheets are not considered for evaluation.**
- **Fill and shade the application number in the Sl. Number 11 of the O.M.R. sheet.**

1. The sealed Question Paper Booklet contains 150 questions and O.M.R. Answer Sheets. Verify whether the given Question Paper Booklet is of the same PAPER and MEDIUM as the candidate opted in the application.
2. The Questions are printed in Kannada and English Medium. **But in any case of any discrepancies/doubt the question in English Medium is considered as valid.**
3. The Question Paper contains four parts I, II, III and IV consisting of **150** Objective Type Questions, **EACH QUESTION CARRYING ONE MARK.**

| Parts | Subjects | Q. No. | Page No. |
|---|---|---|---|
| Part – I | Lang. – I (Kannada, English, Urdu, Tamil, Telugu, Marathi, Hindi, Sanskrit) | 1 to 30 | 2 to 40 |
| Part – II | Lang. – II (Kannada, English, Urdu, Tamil, Telugu, Marathi, Hindi, Sanskrit) | 31 to 60 | 41 to 78 |
| Part – III | CDP (Kannada) | 61 to 90 | 79 to 83 |
| Part – III | CDP (English) | 61 to 90 | 84 to 87 |
| Part – IV | Social Science (Kannada) | 91 to 150 | 88 to 100 |
| Part – IV | Social Science (English) | 91 to 150 | 101 to 112 |

4. **Part – I contains 30 Questions for the Language – I and Part – II contains 30 Questions for the Language – II. In this Question Paper Booklet Questions pertaining to all Languages have been given. The Languages being answered must tally with the Languages opted by the candidate in online application.**
5. Candidates are required to attempt Questions in Part – II (Language – II) in any Language other than the Language chosen in the Part – I (Language – I).
6. **Questions related to Part – III : Child Development and Pedagogy (Q. No. 61 to 90), Part – IV : Social Science (Q. No. 91 to 150) are given both in Kannada and English medium in the Question Paper Booklet. The Questions answered must tally with the medium opted in the online application.**
7. **All the entries in the circle must be made with BLUE OR BLACK BALL POINT PEN ONLY. Any alteration in the answer counts as invalid. Usage of whitener/overwriting on OMR Answer Sheet is not permitted and such answer booklet is not considered for evaluation.**
8. Each candidate is given carbonless O.M.R. answer sheet along with the original O.M.R. answer sheet. Candidate should return the **ORIGINAL O.M.R. ANSWER SHEET TO THE ROOM SUPERVISOR** and retain the carbonless copy of the same with the candidate.
9. Calculator, mobile phone and any other electronic devices are not allowed.
10. **If a candidate is found committing malpractice, necessary action will be taken against such candidate as per the examination rules.**

SEAL



2023

SHIKARAT.COM

## PART – I

### ಭಾಷೆ – I

### ಕನ್ನಡ

**ಸೂಚನೆ : ಈ ಕೆಳಗೆ ಕೊಟ್ಟಿರುವ ಗದ್ಯಭಾಗವನ್ನು ಓದಿ, ಕೇಳಿರುವ ಪ್ರಶ್ನೆಗಳಿಗೆ (1 ರಿಂದ 8) ಉತ್ತರಿಸಿರಿ :**

ಚಂಪೂ ಎಂಬುದು ಒಂದು ವಿಶಿಷ್ಟವಾದ ಕಾವ್ಯ ಪ್ರಕಾರ. ಚಂಪೂವಿನಲ್ಲಿ ಗದ್ಯ, ಪದ್ಯಗಳೆರಡೂ ಬಳಕೆಯಾಗಿರುತ್ತವೆ. ಆದ್ದರಿಂದಲೇ ಇದನ್ನು 'ಮಿಶ್ರಕಾವ್ಯ' ಎಂದು ಸಹ ಕರೆಯುವರು. ಇದರಲ್ಲಿ ಅನೇಕ ಬಗೆಯ ಪದ್ಯ ಜಾತಿಗಳು ಬಳಕೆಯಾಗಿರುತ್ತವೆ. ಮುಖ್ಯವಾಗಿ 'ಆರು' ಪದ್ಯ ಜಾತಿಗಳು ಹೆಚ್ಚಾಗಿ ಬಳಕೆಯಾಗಿದ್ದು ಇವನ್ನು 'ಖ್ಯಾತಕರ್ನಾಟಕ'ಗಳೆಂದು ಕರೆಯುತ್ತಾರೆ. ಅವುಗಳೆಂದರೆ, ಚಂಪಕಮಾಲೆ, ಉತ್ಪಲಮಾಲೆ, ಮತ್ತೇಭವಿಕ್ರೀಡಿತ, ಶಾರ್ದೂಲವಿಕ್ರೀಡಿತ, ಸ್ರಗ್ಧರೆ ಮತ್ತು ಮಹಾಸ್ರಗ್ಧರೆ, ಇವು ಸಂಸ್ಕೃತ ವೃತ್ತಗಳು. ಇವಲ್ಲದೆ ಚಂಪೂ ಕಾವ್ಯಗಳಲ್ಲಿ ಕನ್ನಡ ಪದ್ಯ ಜಾತಿಗಳಾದ ತ್ರಿಪದಿ, ಅಕ್ಕರ ಮತ್ತು ರಗಳೆಗಳೂ ಬಳಕೆಯಾಗಿವೆ. 'ಕಂದ'ದ ಬಳಕೆಯನ್ನು ವಿಶೇಷವಾಗಿ ಚಂಪೂ ಕಾವ್ಯಗಳಲ್ಲಿ ಕಾಣಬಹುದು.

ಚಂಪೂವಿನಲ್ಲಿ ಗದ್ಯವು ಸಾಧಾರಣ ವಿಷಯ ನಿರೂಪಣೆಗೋ ಅಥವಾ ಏನಾದರೂ ವಿವರಣೆ ನೀಡಲೋ ಬಳಕೆಯಾಗಿರುತ್ತವೆ. ಚಂಪೂ ಕೃತಿಗಳು ದೀರ್ಘವಾದ ಕಾವ್ಯಗಳೇ ಸರಿ. ವಿಸ್ತಾರವಾದ ಕತೆಯನ್ನು ಇವು ಒಳಗೊಂಡಿರುತ್ತವೆ. ಕತೆಯ ಬೇರೆ ಬೇರೆ ಘಟ್ಟಗಳಿಗೆ ಅನುಗುಣವಾಗಿ ಲಂಬ, ಸಂಧಿ, ಆಶ್ವಾಸಗಳೆಂದು ವಿಭಾಗಗಳಾಗಿ ವಿಂಗಡಿಸಿರುವುದು ಕಾಣಬರುತ್ತದೆ.

ಚಂಪೂ ಕಾವ್ಯಗಳಲ್ಲಿ ಹದಿನೆಂಟು ವರ್ಣನೆಗಳಿದ್ದು ಶೃಂಗಾರ, ವೀರ, ಶಾಂತ ರಸಗಳು ಮುಖ್ಯವಾಗಿದ್ದು ಉಳಿದ ರಸಗಳು ಇವನ್ನು ಅನುಸರಿಸಿಕೊಂಡು ಬಂದಿರುತ್ತವೆ. ಕಾವ್ಯದ ಆರಂಭದಲ್ಲಿ ಮಂಗಳಪದ್ಯವಿರುತ್ತದೆ. ಇದರಲ್ಲಿ ಕವಿ ತನ್ನ ಆರಾಧ್ಯ ದೈವವನ್ನು ಪ್ರಾರ್ಥಿಸುತ್ತಾನೆ. ನಂತರ ಹಿಂದಿನ ಕವಿಗಳು, ತನ್ನ ಕಾವ್ಯದ ವೈಶಿಷ್ಟ್ಯ, ಹಾಗೂ ವೈಯಕ್ತಿಕ ವಿವರಗಳನ್ನು ಕೊಟ್ಟಿರುತ್ತಾನೆ. ಪ್ರತಿ ಸಂಧಿ ಅಥವಾ ಆಶ್ವಾಸದ ಕಡೆಯಲ್ಲಿ ಕವಿ ತನ್ನ ಬಿರುದುಗಳನ್ನು, ಯಾರಿಂದ ಕೃತಿ ರಚನೆಯಾಯಿತು ಎಂಬುದನ್ನು ಹೇಳಿಕೊಂಡಿರುತ್ತಾನೆ. ಕಾವ್ಯದ ಕೊನೆಯಲ್ಲಿ ತನ್ನ ಕಾವ್ಯವನ್ನು ಓದುವುದರಿಂದ ದೊರೆಯುವ ಪ್ರಯೋಜನ ಅಥವಾ ಫಲವೆಂತಹದು ಎಂಬುದನ್ನು ಹೇಳುತ್ತಾನೆ. ಇದಕ್ಕೆ 'ಫಲಶೃತಿ' ಎಂದು ಹೆಸರು. ಕಾವ್ಯದ ಮೊದಲಲ್ಲಿ ಅಥವಾ ಕೊನೆಯಲ್ಲಿ ಕವಿ ತನ್ನ ಆಶ್ರಯದಾತನನ್ನು ಕುರಿತಾದ ಕೆಲವು ವಿಚಾರಗಳನ್ನು ಹೇಳಿರುತ್ತಾನೆ.

ಹಳಗನ್ನಡದಲ್ಲಿ ಚಂಪೂ ಕಾವ್ಯಗಳು ಹೆಚ್ಚಾಗಿ ಕಾಣಬರುತ್ತವೆ. ಪಂಪನ 'ವಿಕ್ರಮಾರ್ಜುನ ವಿಜಯ', 'ಆದಿಪುರಾಣ', ರನ್ನನ 'ಗದಾಯುದ್ಧ' ಮೊದಲಾದವು ಚಂಪೂ ಕಾವ್ಯಗಳಿಗೆ ಉದಾಹರಣೆ: ಚಂಪೂ ರೂಪವು ಪಂಪಯುಗದಲ್ಲಿ ಅಂದರೆ ೧೦ ರಿಂದ ೧೨ ನೇ ಶತಮಾನದವರೆಗಿನ ಅವಧಿಯಲ್ಲಿ ಹೆಚ್ಚು ಜನಪ್ರಿಯವಾಗಿತ್ತು. ಅನಂತರದ ಶತಮಾನಗಳಲ್ಲಿ ಅನೇಕ ಚಂಪೂ ಕಾವ್ಯಗಳು ರಚಿತವಾಗಿವೆ. ಕಂದ, ವೃತ್ತಗಳ ಬಳಕೆಯೊಂದಿಗೆ, ದೇಸಿ ಛಂದಸ್ಸಿನ ಪ್ರಕಾರಗಳಾದ ರಗಳೆ–ಅಕ್ಕರ–ತ್ರಿಪದಿಯ ಬಳಕೆ ಸಹ ಸೇರಿ ಚಂಪೂ ಹೊಸ ಸ್ವರೂಪವನ್ನು ಪಡೆಯಿತು. ಆದ್ದರಿಂದಲೇ 'ಈ ಯುಗದ ಚಂಪೂ ಕನ್ನಡ ಚಂಪೂವಾಯಿತು' ಎನ್ನುವರು.

1. ಚಂಪೂ ಕಾವ್ಯ ಪ್ರಕಾರವನ್ನು ಹೀಗೂ ಕರೆಯುವರು

(1) ಮಿಶ್ರ ಕಾವ್ಯ (2) ಕಥನ ಕಾವ್ಯ (3) ಗದ್ಯ ಕಾವ್ಯ (4) ಖಂಡ ಕಾವ್ಯ



SHIKARAT.COM

2. 'ಚಂಪಕಮಾಲೆ' ಎಂಬುದು ಈ ಪದ್ಯಜಾತಿಗೆ ಸೇರಿದೆ

(1) ತ್ರಿಪದಿ
(2) ಕಂದ ಪದ್ಯ
(3) ರಗಳೆ
(4) ಖ್ಯಾತ ಕರ್ನಾಟಕ ವೃತ್ತ

3. ಚಂಪೂ ಕಾವ್ಯಗಳಲ್ಲಿ ವಿಶೇಷವಾಗಿ ಬಳಕೆಯಾಗಿರುವ ಛಂದಸ್ಸು

(1) ತ್ರಿಪದಿ
(2) ಕಂದ
(3) ಅಕ್ಕರ
(4) ರಗಳೆ

4. ಲಂಬ, ಸಂಧಿ, ಆಶ್ವಾಸಗಳೆಂದು ವಿಭಾಗಗಳಾಗಿ ವಿಂಗಡಿಸಿರುವುದು

(1) ಕತೆಯ ವಸ್ತುಗಳಿಗೆ ಅನುಗುಣವಾಗಿ
(2) ಕತೆಯಲ್ಲಿ ಬಳಕೆಯಾದ ಪದ್ಯಜಾತಿಗಳಿಗೆ ಅನುಗುಣವಾಗಿ
(3) ಕತೆಯ ಬೇರೆ ಬೇರೆ ಘಟ್ಟಗಳಿಗೆ ಅನುಗುಣವಾಗಿ
(4) ಕತೆಯ ವರ್ಣನೆಗಳಿಗೆ ಅನುಗುಣವಾಗಿ

5. ಈ ಲೇಖನವು ಹೇಳುವಂತೆ ಕಾವ್ಯವನ್ನು ಓದುವುದರಿಂದ ದೊರೆಯುವ ಪ್ರಯೋಜನಕ್ಕೆ ಹೀಗೆನ್ನುವರು

(1) ಫಲಶೃತಿ
(2) ಪುಣ್ಯಪ್ರಾಪ್ತಿ
(3) ಮನೋರಂಜನೆ
(4) ಇಷ್ಟಾರ್ಥಸಿದ್ಧಿ

6. ಚಂಪೂ ಕಾವ್ಯಗಳ ವರ್ಣನೆಯಲ್ಲಿ ಮುಖ್ಯವಾಗಿರುವ ರಸಗಳು

(1) ಕರುಣ, ಅದ್ಭುತ, ಶೃಂಗಾರ
(2) ಶೃಂಗಾರ, ವೀರ, ಶಾಂತ
(3) ಶಾಂತ, ಭಯಾನಕ, ರೌದ್ರ
(4) ರೌದ್ರ , ವೀರ, ಹಾಸ್ಯ

7. ಚಂಪೂ ರೂಪವು ಹೆಚ್ಚು ಜನಪ್ರಿಯವಾಗಿದ್ದ ಯುಗ

(1) ಪಂಪಪೂರ್ವಯುಗ
(2) ಬಸವಯುಗ
(3) ಕುಮಾರವ್ಯಾಸಯುಗ
(4) ಪಂಪಯುಗ

8. ಕವಿ ತನ್ನ ಬಿರುದುಗಳನ್ನು, ಯಾರಿಂದ ಕೃತಿ ರಚನೆಯಾಯಿತು ಎಂಬುದನ್ನು ಹೇಳಿಕೊಂಡಿರುವುದು ಇಲ್ಲಿ

(1) ಪ್ರತಿ ಸಂಧಿ ಅಥವಾ ಆಶ್ವಾಸದ ಆರಂಭದಲ್ಲಿ
(2) ಕಾವ್ಯದ ಆರಂಭದಲ್ಲಿ
(3) ಪ್ರತಿ ಸಂಧಿ ಅಥವಾ ಆಶ್ವಾಸದ ಕಡೆಯಲ್ಲಿ
(4) ಕಾವ್ಯದ ಕೊನೆಯಲ್ಲಿ



SHIKARAT.COM

**ಸೂಚನೆ : ಈ ಕೆಳಗೆ ಕೊಟ್ಟಿರುವ ಪದ್ಯವನ್ನು ಓದಿ, ಕೇಳಿರುವ ಪ್ರಶ್ನೆಗಳಿಗೆ (9 ರಿಂದ 15) ಉತ್ತರಿಸಿ :**

ಬಚ್ಚಿಟ್ಟುಕೊಂಡು ಬದುಕುವುದು ನನಗಿಷ್ಟವಿಲ್ಲ;
ಹಾಗಂತ ಎಲ್ಲವನ್ನೂ ಬಿಚ್ಚಿ ಹರಾಜಿಗಿಡುತ್ತೇನೆಂದು
ಇದರರ್ಥವಲ್ಲ.

ಬಹು ದೊಡ್ಡ ಮಾತನಾಡುತ್ತ
ದಿನದಿನದ ಸರಳ ಸಾಧಾರಣದ ಬದುಕಿ-
ಗವಮಾನ ಮಾಡುವವರನ್ನು ಕಂಡರೆ
ನನಗೆ ಆಗುವುದಿಲ್ಲ.

ತೂಗಾಡುವ ಕಿರೀಟಗಳಿಗೆ ತಕ್ಕಂತೆ
ತಲೆಯ ಆಕಾರಗಳನ್ನು ಬದಲಾಯಿಸುತ್ತ
ಪರದಾಡುವುದು ನನಗೆ ಅಭ್ಯಾಸವಿಲ್ಲ.
ಹೇಗೋ ನನ್ನ ಪಾಡಿಗೆ ನಾನು ಬದುಕುತ್ತೇನೆ;
ಇದ್ದಷ್ಟು ನೆಲವ ಉತ್ತು ಬಿತ್ತಿ ನೀರೆರೆದು
ಮಲಗಿರುವ ಬೀಜಗಳ ಕಣ್ಣು ತೆರೆಸುತ್ತೇನೆ.
ನಾಳೆ ಈ ಸಸಿಗಳೆಲ್ಲ ವಟವೃಕ್ಷವಾಗಿ
ಸಾವಿರ ಜನಕ್ಕೆ ನೆರಳಾದಾವೆಂಬ ಮಹದಾಸೆ ಇರದಿದ್ದರೂ
ಒಂದೆರಡಾದರೂ ಬೀಜವಾಗುವಂಥ ಹಣ್ಣು
ಬಿಟ್ಟಾವೆಂದು ನಂಬಿ ಕಾಯುತ್ತೇನೆ.

9. ಕವಿಗೆ ಹೀಗೆ ಬದುಕುವುದು ಇಷ್ಟವಿಲ್ಲ

(1) ಬಚ್ಚಿಟ್ಟುಕೊಂಡು
(2) ನನ್ನ ಪಾಡಿಗೆ ನಾನು
(3) ನಂಬಿ ಕಾಯುತ್ತ
(4) ಮಲಗಿರುವ ಬೀಜಗಳ ಕಣ್ಣು ತೆರೆಸುತ್ತ

10. ಕವಿಗೆ ಇವರನ್ನು ಕಂಡರೆ ಆಗುವುದಿಲ್ಲ

(1) ತನ್ನ ಪಾಡಿಗೆ ತಾನು ಬದುಕುವವರನ್ನು
(2) ಇದ್ದಷ್ಟು ನೆಲವ ಉತ್ತು ಬಿತ್ತಿ ನೀರೆರೆವವರನ್ನು
(3) ಬಹುದೊಡ್ಡ ಮಾತನಾಡುತ್ತ ಸರಳ ಸಾಧಾರಣ ಬದುಕಿಗೆ ಅವಮಾನ ಮಾಡುವವರನ್ನು
(4) ನಂಬಿ ಕಾಯುವವರನ್ನು



SHIKARAT.COM

11. ಕವಿಗೆ ಇದರ ಅಭ್ಯಾಸವಿಲ್ಲ

(1) ಹೇಗೋ ನನ್ನ ಪಾಡಿಗೆ ನಾನು ಬದುಕುವುದು

(2) ತೂಗಾಡುವ ಕಿರೀಟಗಳಿಗೆ ತಕ್ಕಂತೆ ತಲೆಯ ಆಕಾರಗಳನ್ನು ಬದಲಾಯಿಸುತ್ತ ಪರದಾಡುವುದು

(3) ಇದ್ದಷ್ಟು ನೆಲವ ಉತ್ತು ಬಿತ್ತಿ ನೀರೆರೆದು ಬೀಜಗಳ ಕಣ್ಣು ತೆರೆಸುವುದು

(4) ಸಸಿಗಳಲ್ಲಿ ಒಂದೆರಡಾದರೂ ಬೀಜವಾಗುವಂಥ ಹಣ್ಣು ಬಿಟ್ಟಾವೆಂದು ನಂಬಿ ಕಾಯುವುದು

12. ಕವಿ ಹೀಗೆ ಬದುಕುತ್ತೇನೆ ಎನ್ನುತ್ತಾರೆ

(1) ಬಚ್ಚಿಟ್ಟುಕೊಂಡು

(2) ಸರಳ, ಸಾಧಾರಣ ಬದುಕಿಗೆ ಅವಮಾನ ಮಾಡುತ್ತ

(3) ಕಿರೀಟಕ್ಕೆ ತಕ್ಕಂತೆ ತಲೆಯ ಆಕಾರ ಬದಲಾಯಿಸುತ್ತ

(4) ಹೇಗೋ ನನ್ನ ಪಾಡಿಗೆ ನಾನು

13. ಕವಿ ನೆಲವನ್ನು ಉತ್ತಿ ಬಿತ್ತಿ ನೀರೆರೆಯುವುದು

(1) ಬಚ್ಚಿಟ್ಟುಕೊಂಡು ಬದುಕಲು

(2) ಮಲಗಿರುವ ಬೀಜಗಳ ಕಣ್ಣು ತೆರೆಸಲು

(3) ಎಲ್ಲವನ್ನೂ ಬಿಚ್ಚಿ ಹರಾಜಿಗಿಡಲು

(4) ಸರಳ, ಸಾಧಾರಣ ಬದುಕಿಗೆ ಅವಮಾನ ಮಾಡಲು

14. ಕವಿ ಸಸಿಗಳ ಕುರಿತು ನಂಬಿಕೆಯಿಂದ ಕಾಯುತ್ತಿರುವುದು

(1) ಸಾವಿರ ಜನಕ್ಕೆ ನೆರಳಾದಾವೆಂದು

(2) ಈ ಸಸಿಗಳೆಲ್ಲ ವಟವೃಕ್ಷಗಳಾಗಿ ಬೆಳೆಯುವುದೆಂದು

(3) ನನ್ನ ಬದುಕಿಗೆ ಆಶ್ರಯವಾದೀತೆಂದು

(4) ಒಂದೆರಡಾದರೂ ಬೀಜವಾಗುವಂಥ ಹಣ್ಣು ಬಿಟ್ಟಾವೆಂದು

15. ಪರದಾಡುವುದು ಎಂದರೆ

(1) ಬವಣೆಪಡುವುದು

(2) ನೆಮ್ಮದಿಯಿಂದಿರುವುದು

(3) ಖುಷಿ ಅನುಭವಿಸುವುದು

(4) ಸರಳವಾಗಿ ಬದುಕುವುದು

16. ಉತ್ತಮ ಆಲಿಸುವಿಕೆಯ ಲಕ್ಷಣ ಇದಾಗಿದೆ

(1) ಮೇಲರಿಮೆ ಅಥವಾ ಕೀಳರಿಮೆಯಿಂದ ಕೇಳುವುದು

(2) ಉತ್ತಮ ಭಾಷಾ ಸಾಮರ್ಥ್ಯದೊಂದಿಗೆ ಆಲಿಸುವುದು

(3) ಆಲಿಸುವಿಕೆಯಲ್ಲಿ ಹಿಮ್ಮರಳುವಿಕೆ ಇರುವುದು

(4) ಹೇಳುವ ವ್ಯಕ್ತಿಯ ಕುರಿತು ಪೂರ್ವಗ್ರಹ ಭಾವನೆಯಿರುವುದು



SHIKARAT.COM

17. ಮುದ್ರಿತ ವಿಷಯವನ್ನು ವೇಗವಾಗಿ ಓದುತ್ತಾ ಅದೇ ವೇಗದಲ್ಲಿ ಅರ್ಥಮಾಡಿಕೊಳ್ಳುವ ಓದುಗಾರಿಕೆಯ ವಿಧಾನ

(1) ಗಟ್ಟಿ ಓದು
(2) ವಿಷಯ ಸಂಗ್ರಹಣಾ ಓದು
(3) ವಿಮರ್ಶಾತ್ಮಕ ಓದು
(4) ವೇಗವರ್ಧಿತ ಓದು

18. ಉತ್ತಮ ಕೈಬರೆಹದ ಲಕ್ಷಣ

(1) ಕಾಗುಣಿತದ ಕ್ರಮಬದ್ಧತೆ
(2) ಪದಗಳನ್ನು ಕತ್ತರಿಸಿ ಬರೆಯುವುದು
(3) ವಕ್ರವಾದ ಸಾಲುಗಳಲ್ಲಿ ಬರೆಯುವುದು
(4) ಅಕ್ಷರಗಳ ಗಾತ್ರ ಚಿಕ್ಕದು, ದೊಡ್ಡದು ಮಾಡಿ ಬರೆಯುವುದು

19. ಖಂಡ ಪದ್ಧತಿಯ ಲಕ್ಷಣವೆಂದರೆ

(1) ಇಡಿಯಿಂದ ಬಿಡಿಗೆ
(2) ಕಡಿಮೆ ಸಮಯ
(3) ಬಿಡಿಯಿಂದ ಇಡಿಗೆ
(4) ಸ್ವಾಭಾವಿಕ ಕಲಿಕೆ

20. ವ್ಯಾಕರಣ ಬೋಧನೆಯು ಈ ಉದ್ದೇಶ ಹೊಂದಿಲ್ಲ

(1) ರಸಾನುಭವ ಮತ್ತು ಸೌಂದರ್ಯ ಪ್ರಜ್ಞೆ ಬೆಳೆಸುವುದು
(2) ಪದ ಮತ್ತು ವಾಕ್ಯರಚನಾ ಕೌಶಲ ಬೆಳೆಸುವುದು
(3) ಭಾಷೆಯ ಬಗೆಗೆ ತಾರ್ಕಿಕ ಜ್ಞಾನ ಬೆಳೆಸುವುದು
(4) ಶುದ್ಧ, ಅರ್ಥಬದ್ಧ ಅಭಿವ್ಯಕ್ತಿ ಕೌಶಲ ಬೆಳೆಸುವುದು

21. ಬರವಣಿಗೆಯ ಕೌಶಲ ಸಂವರ್ಧನೆಗೆ ಈ ಚಟುವಟಿಕೆ ಸೂಕ್ತವಾದುದಲ್ಲ

(1) ಗಾದೆ ಮಾತು ವಿಸ್ತರಣೆ
(2) ಪತ್ರಲೇಖನ
(3) ಪರಸ್ಪರ ಸಂಭಾಷಣೆ ಏರ್ಪಡಿಸುವುದು
(4) ಪ್ರಬಂಧ ರಚನೆ

22. ನಾಟಕ ಸಾಹಿತ್ಯ ಬೋಧಿಸುವಾಗ ಈ ಅಂಶದ ಕಡೆಗೆ ಹೆಚ್ಚು ಒತ್ತು ಕೊಡಬೇಕು

(1) ವೈಚಾರಿಕತೆ
(2) ಸಂಭಾಷಣೆ ಮತ್ತು ಸನ್ನಿವೇಶ ಚಿತ್ರಣ
(3) ಭೌಗೋಳಿಕ ವೈಶಿಷ್ಟ್ಯ
(4) ಪ್ರಚಲಿತ ವಿದ್ಯಮಾನಗಳ ವಿಶ್ಲೇಷಣೆ

23. ಉಪನ್ಯಾಸ ವಿಧಾನದ ಬೋಧನೆಯ ಅನುಕೂಲವೆಂದರೆ

(1) ಹಗಲುಗನಸಿಗೆ ನಾಂದಿ
(2) ಮೌಲ್ಯಮಾಪನಕ್ಕೆ ಅವಕಾಶವಿಲ್ಲ
(3) ಅಧ್ಯಾಪಕರ ನೆನಪಿನ ಶಕ್ತಿಯ ಮೇಲೆ ಅಪಾರ ಹೊರೆ ಬೀಳುತ್ತದೆ
(4) ಎಂತಹ ದೊಡ್ಡ ಗುಂಪು, ಸಭೆಗಳಿಗೂ ಇದನ್ನು ಹೊಂದಿಸಬಹುದು

24. ಹೌದು, ಚೆನ್ನಾಗಿದೆ, ಅದ್ಭುತ, ಸರಿಯಾಗಿ ಹೇಳಿದೆ – ಈ ಶಬ್ದಗಳು

(1) ಧನಾತ್ಮಕ ಶಾಬ್ದಿಕ ಅಭಿವರ್ಧನಗಳು

(2) ಧನಾತ್ಮಕ ಅಶಾಬ್ದಿಕ ಅಭಿವರ್ಧನಗಳು

(3) ಋಣಾತ್ಮಕ ಶಾಬ್ದಿಕ ಅಭಿವರ್ಧನಗಳು

(4) ಋಣಾತ್ಮಕ ಅಶಾಬ್ದಿಕ ಅಭಿವರ್ಧನಗಳು

25. ಘಟಕ ಯೋಜನೆಯ ಆಧಾರದಲ್ಲಿ ಅಧ್ಯಾಪಕರು ಉಪಘಟಕಗಳನ್ನು ವಿಶ್ಲೇಷಿಸಿ ಬೋಧಿಸಿದ ನಂತರ ವಿದ್ಯಾರ್ಥಿಗಳ ಕಲಿಕೆಯ ಸಾಮರ್ಥ್ಯವನ್ನು ಬೆಲೆಕಟ್ಟಲು ಕೈಗೊಳ್ಳುವ ಪರೀಕ್ಷೆ

(1) ನೈದಾನಿಕ ಪರೀಕ್ಷೆ
(2) ಸಾಫಲ್ಯ ಪರೀಕ್ಷೆ
(3) ಘಟಕ ಪರೀಕ್ಷೆ
(4) ವಾರ್ಷಿಕ ಪರೀಕ್ಷೆ

26. 'ಕಡುವೆಳ್ಪು' ಪದವು

(1) ಆದೇಶ ಸಂಧಿ
(2) ಜಶ್ತ್ವ ಸಂಧಿ
(3) ಆಗಮ ಸಂಧಿ
(4) ಲೋಪ ಸಂಧಿ

27. 'ಲಿಪಿಯಲ್ಲಿ' ಈ ಪದದಲ್ಲಿರುವ ವಿಭಕ್ತಿ ಮತ್ತು ಅದರ ಕಾರಕಾರ್ಥಗಳ ಸರಿಯಾದ ಜೋಡಿ

(1) ದ್ವಿತೀಯಾ ವಿಭಕ್ತಿ – ಕರ್ಮಾರ್ಥ
(2) ದ್ವಿತೀಯಾ ವಿಭಕ್ತಿ – ಅಪಾದಾನಕಾರಕ
(3) ಸಪ್ತಮೀ ವಿಭಕ್ತಿ – ಅಧಿಕರಣಕಾರಕ
(4) ಸಪ್ತಮೀ ವಿಭಕ್ತಿ – ಅಪಾದಾನಕಾರಕ

28. 'ಮನುಷ್ಯ' ಎಂಬ ಪದವು

(1) ಅಂಕಿತನಾಮ
(2) ರೂಢನಾಮ
(3) ಅನ್ವರ್ಥನಾಮ
(4) ಭಾವನಾಮ

29. ಚತುರ್ಥೀ ವಿಭಕ್ತಿಯ ಕಾರಕಾರ್ಥ

(1) ಅಪಾದಾನ
(2) ಅಧಿಕರಣ
(3) ಸಂಬಂಧ
(4) ಸಂಪ್ರದಾನ

30. ಪೂರ್ವೋತ್ತರ ಪದಗಳು ಲಿಂಗ, ವಚನ, ವಿಭಕ್ತಿಗಳಿಂದ ಸಮಾನವಾಗಿದ್ದು ವಿಶೇಷಣ–ವಿಶೇಷ್ಯ ಸಂಬಂಧದಿಂದ ಕೂಡಿ ಆಗುವ ಸಮಾಸ

(1) ಕರ್ಮಧಾರಯ ಸಮಾಸ
(2) ತತ್ಪುರುಷ ಸಮಾಸ
(3) ದ್ವಿಗು ಸಮಾಸ
(4) ಅಂಶಿ ಸಮಾಸ



SHIKARAT.COM

## PART – II
## Language – II
## ENGLISH

**Read the passage and answer the questions 31 – 38 by choosing the most appropriate option :**

Mallu lived in a village near the forest. He went daily to the forest to fetch wood, wild fruits and flowers from the forest. He sold them in the nearby town and gave the money to his mother Shanthamma. One day, when he was plucking jack fruits, a big elephant came there. Mallu was afraid. The elephant waved his trunk and fan like ears. Mallu requested the elephant, "Gajaraja, I am a poor boy. Don't harm me. My mother is alone at home, I must take money to her." Gajaraja stood still. Mallu thanked the elephant, took his bag and bundle of wood and went home.

The next day was Mallu's birthday. Shanthamma had prepared sweets. Mallu took some sweets, went to the forest and waited for Gajaraja. When he came, Mallu offered sweets, jaggery and other nice food to Gajaraja and said, "Oh, great Gajaraja ! Please take these sweets and be my friend. Today is my birthday". Gajaraja happily ate all the sweets and said, "Mallu dear, I am very happy today, because of the sweets and your friendship. Thank you. Now come with me."

Gajaraja helped Mallu to climb upon him. Mallu felt very happy and proud sitting on the back of the elephant. Mallu and Gajaraja went into the deep forest. Then Gajaraja took Mallu near a big tree. There was a wide hollow in the tree. Gajaraja took out fruits and other rare objects from that hollow, and gave them to Mallu. Everyday, Mallu would bring some nice food to Gajaraja, and Gajaraja supplied wood, fruits and flowers to Mallu. By selling those things, Mallu earned enough money and became a shop owner. Sometimes, Gajaraja visited Mallu in his shop.

One day Gajaraja looked very sad. He told Mallu, "People are destroying the forest. We have no place to live. My son went to a town in search of food and he was killed. What have we done to you all Mallu ?" Mallu had no answer.

**31.** Mallu thanked Gajaraja because
(1) He hit him with his trunk
(2) He did not harm him
(3) He poured water on him
(4) He allowed him to touch his body

**32.** Gajaraja took Mallu upon him because he wanted to
(1) Show the forest only
(2) Make him enjoy the ride only
(3) Give him fruits and other rare objects
(4) Show him the other animals in the forest

**33.** When Mallu saw the big elephant in the forest, he was
(1) Shocked
(2) Afraid
(3) Delighted
(4) Enchanted



SHIKARAT.COM

34. Gajaraja's son had gone to a town because he was
(1) hungry
(2) crazy
(3) furious
(4) lost

35. Sitting on the back of the elephant Mallu felt
(1) Surprised
(2) Satisfied
(3) Proud
(4) Afraid

36. Mallu sold the fruits and flowers in the nearby town.
The suitable question tag to be used for the given sentence is
(1) Did he ?
(2) Doesn't he ?
(3) Wasn't he ?
(4) Didn't he ?

37. 'We have no place to live'
In the given sentence, the underlined word is a/an
(1) Noun
(2) Adjective
(3) Verb
(4) Adverb

38. The synonym for the word 'hollow' used in the story is
(1) Crater
(2) Clasp
(3) Crest
(4) Consent

**Read the poem and answer the questions from 39 – 45, choosing the most appropriate option :**

A village pedagogue announced one day
Unto his pupils, that inspector 'A'
Was coming to examine them. Quoth he;
"If he should try in Geography,
Most likely he will ask . . . 'What's the earth's shape ?'
Then if you feel as stupid as an ape,
Just look at me; my snuff-box I will show,
Which will remind you it is round, you know"
Now, the Sagacious master, I declare,
Had two snuff-boxes . . . one round, t' other square :
The square he carried through the week, the round
On Sundays only. Hark ! a foot step's sound :
'T' is the inspector. "What's the earth's shape, lad ?"
Addressing one by name. The Latter, glad
To have his memory helped, look at the master ;
When, piteous to relate. O sad disaster !
The pupil without hesitation says :
"Round, sir, on Sundays, square on other days."



SHIKARAT.COM

39. The shape of the teacher's snuff box on Sundays was

(1) Square
(2) Round
(3) Rectangle
(4) Oval

40. "If you feel as stupid as an ape"

The figure of speech in the given line is

(1) Simile
(2) Metaphor
(3) Personification
(4) Alliteration

41. 'A foot steps' sound' in the poem refers to the fact that

(1) the teacher had left the class
(2) the students walked out of the class
(3) the inspector left the class
(4) the inspector had arrived

42. If the students failed to remember the answer to the inspector's question.

(1) the students could ask other students for the answer
(2) the students could ask the inspector for the answer
(3) the teacher would show them his snuff-box
(4) the students could keep quiet without answering

43. The poet through the poem, wants to convey that

(1) One should learn things correctly
(2) Students should always depend on their teachers for answers
(3) The earth can have different shapes on different days
(4) School inspector should always ask the same question

44. In the poem, if the word 'show' rhymes with 'know', then the words 'square' and 'glad' rhyme with

(1) declare ; ape
(2) shape ; lad
(3) relate ; sad
(4) declare ; lad

45. In the poem "Pedagogue" is synonymous with

(1) Teacher
(2) Student
(3) Inspector
(4) Monitor

KMSS



SHIKARAT.COM

**Answer questions 46 – 50 choosing the most appropriate option following the given directions :**

46. 'Spoorti was planting a sapling'.
The passive form of the above sentence is
(1) A sapling is being planted by Spoorti
(2) A sapling was being planted by Spoorti
(3) A sapling has been planted by Spoorti
(4) A sapling was planted by Spoorti

47. Aditi throws _________ one rupee coin, into ___________ river Krishna.
The suitable words to be used in the above sentence are
(1) an, the
(2) a, an
(3) a, the
(4) the, a

48. The bridge was built __________ the river.
The suitable word to be used in the given sentence is
(1) across
(2) along
(3) at
(4) in

49. If she had returned home earlier, I ___________ met her.
The suitable form of words to be filled in the blank is
(1) will have
(2) have been
(3) would had
(4) would have

50. It is years since I _________ him.
He has ___________ his best days.
The appropriate form of words to be used to fill the blanks are
(1) seeing, seen
(2) saw, seen
(3) seen, saw
(4) sees, seen

**Answer questions 51 – 60 choosing the most appropriate option :**

51. Teacher uses online audio dictionary, in the classroom, to teach
(1) Spellings of the words
(2) Meanings of the words
(3) Pronunciation of the words
(4) Word order

52. The full form of 'sth' found in dictionary entries stand for
(1) something
(2) subject
(3) superlative
(4) somebody



SHIKARAT.COM

53. Co.ord.in.ate is an entry found in a dictionary for the word 'co-ordinate'. The underlined entry is

(1) The spelling of the word
(2) Pronunciation including syllable stress
(3) Grammatical function
(4) Meaning of the word

54. The correct sequence of facilitating a prose lesson by the teacher is

(1) Engage, Evaluate, Explain, Expand, Explore
(2) Engage, Explain, Evaluate, Explore, Expand
(3) Engage, Explore, Explain, Expand, Evaluate
(4) Engage, Expand, Explore, Evaluate, Explain

55. Effective communication involves

(1) Appropriate use of voice and body language
(2) Use of good voice only
(3) Use of body language only
(4) Casual listening

56. The study of speech sounds, their production and the script is

(1) Syntactic
(2) Transcription
(3) Sequencing
(4) Phonetics

57. When the ability of a student to be brief in writing is enhanced, then he has attained the skill of

(1) Editing
(2) Paraphrasing
(3) Summarising
(4) Formatting

58. Practice of minimal pairs, "bin-bean" is used to develop the __________ skills.

(1) Listening
(2) Speaking
(3) Writing
(4) Listening and speaking

59. The "Role play" activity helps learners to develop

(1) Fluency in speaking
(2) Accuracy in writing
(3) Casual listening
(4) Lexical competence

60. The teacher conducts formative Assessments in the classroom.

(1) at the end of every semester
(2) at the beginning of the academic year
(3) throughout the academic year
(4) at the end of the academic year



SHIKARAT.COM

## KANNADA MEDIUM

## PART – III

### ಶಿಶು ವಿಕಸನ ಮತ್ತು ಬೋಧನಾಶಾಸ್ತ್ರ

61. ಒಂದು ಮಗುವು ತನ್ನ ತೋಳು ಮತ್ತು ಕೈಗಳ ಮೇಲೆ ನಿಯಂತ್ರಣವನ್ನು ಪಡೆದು ನಂತರ ತನ್ನ ಬೆರಳುಗಳ ಮೇಲೆ ನಿಯಂತ್ರಣವನ್ನು ಪಡೆಯುತ್ತದೆ. ಇದನ್ನು ಪ್ರತಿನಿಧಿಸುವ ತತ್ವ

(1) ಶಿರಪಾದಾಭಿಮುಖ
(2) ಕೇಂದ್ರ ಪರಿಧಿ ಅಭಿಮುಖ
(3) ಶ್ರೇಣೀಕೃತ
(4) ದೈಹಿಕ

62. ಶೈಶವಾವಧಿಯಲ್ಲಿ ಪ್ರಾರಂಭಗೊಂಡು ಜೀವನ ಪರ್ಯಂತ ಮುಂದುವರೆಯುವ ಪ್ರಕ್ರಿಯೆ

(1) ಸೃಜನಶೀಲತೆ
(2) ಸ್ಮೃತಿ
(3) ಸಾಮಾಜೀಕರಣ
(4) ಮನೋಭಾವ

63. ಕಾಲಂ A ಅನ್ನು ಕಾಲಂ B ನೊಂದಿಗೆ ಹೊಂದಿಸಿ.

| A | B |
|---|---|
| i. ಸಂವೇದನಾ ಗತಿ ಹಂತ | a. ತಾರ್ಕಿಕ ಆಲೋಚನೆ |
| ii. ಕಾರ್ಯ ಪೂರ್ವ ಹಂತ | b. ಸಮಸ್ಯಾ ಪರಿಹಾರ |
| iii. ಮೂರ್ತ ಕಾರ್ಯಗಳ ಹಂತ | c. ವಸ್ತು ಶಾಶ್ವತತೆ |
| iv. ಔಪಚಾರಿಕ ಕಾರ್ಯಗಳ ಹಂತ | d. ಭಾಷಾ ಬೆಳವಣಿಗೆ |

(1) i – d, ii – b, iii – a, iv – c
(2) i – c, ii – a, iii – d, iv – b
(3) i – b, ii – c, iii – a, iv – d
(4) i – c, ii – d, iii – a, iv – b

64. ''ಮಕ್ಕಳು ತಮ್ಮ ಅಸಮರ್ಥ ಪೋಷಕರಿಗಿಂತ ಉತ್ತಮವಾಗಿರಬಹುದು''. ಇದನ್ನು ತಿಳಿಸುವ ಅನುವಂಶೀಯ ಸಿದ್ಧಾಂತ

(1) ವ್ಯತ್ಯಾಸ ನಿಯಮ
(2) ಸಾಮ್ಯತೆಯ ನಿಯಮ
(3) ಉಪಯೋಗಿಸುವ ಮತ್ತು ಉಪಯೋಗಿಸದ ನಿಯಮ
(4) ಪ್ರತಿಗಮನ ನಿಯಮ



SHIKARAT.COM

65. ಮಕ್ಕಳ ಸಾಮಾಜಿಕ ವಿಕಾಸಕ್ಕೆ ಸಹಾಯ ಮಾಡುವ ಚಟುವಟಿಕೆಗಳು

(1) ಬುದ್ಧಿಮಂಥನ, ಕಥೆ ಹೇಳುವುದು

(2) ಗುಂಪು ಆಟಗಳು, ಸಾಂಸ್ಕೃತಿಕ ಚಟುವಟಿಕೆಗಳು

(3) ಮಾರ್ಗದರ್ಶನ, ವೈಯಕ್ತಿಕ ಗಮನ

(4) ವೈಯಕ್ತಿಕ ಆಟಗಳು, ವೇಗವರ್ಧನ

66. ''ಮಕ್ಕಳು ಮತ್ತು ಹದಿಹರೆಯದವರು ವಯಸ್ಕರ ಮಾತನ್ನು ಕೇಳುತ್ತಾರೆ. ಏಕೆಂದರೆ, ವಯಸ್ಕರು ಅವರಿಗೆ ತಮ್ಮ ಮಾತನ್ನು ಕೇಳಲು ಹೇಳುತ್ತಾರೆ''. ಇದು ಕೋಹ್ಲ್‌ಬರ್ಗ್‌ರವರ ನೈತಿಕ ವಿಕಾಸದಡಿಯಲ್ಲಿ ಉದಾಹರಣೆಯಾಗಿರುವುದು

(1) ಶಿಕ್ಷೆ ಮತ್ತು ವಿಧೇಯತೆಗೆ

(2) ಸಂಬಂಧ ಮತ್ತು ಅನುಸರಣೆಗೆ

(3) ಸಾಮಾಜಿಕ ಕಾನೂನು ಮತ್ತು ವ್ಯವಸ್ಥೆಗೆ

(4) ವಿನಿಮಯ ಮತ್ತು ನಿರೀಕ್ಷೆಗೆ

67. ''ಮಗು ಕಣ್ಣಿಗೆ ಕಾಣದೆ ಇರುವ ವಸ್ತುವನ್ನು ಹುಡುಕುತ್ತಿದೆ''. ಪಿಯಾಜೆಯವರ ಪ್ರಕಾರ, ಮಗು ಈ ಕೆಳಗಿನ ಹಂತಕ್ಕೆ ಸೇರಿದೆ

(1) ಸಂವೇದನಾ ಗತಿ ಹಂತ

(2) ಕಾರ್ಯ ಪೂರ್ವ ಹಂತ

(3) ಮೂರ್ತ ಕಾರ್ಯಗಳ ಹಂತ

(4) ಔಪಚಾರಿಕ ಕಾರ್ಯಗಳ ಹಂತ

68. ಈ ಒಂದನ್ನು ಹೊರತುಪಡಿಸಿ ಇವು ಉತ್ತಮ ಚರ್ಚೆಯ ಮಾನದಂಡಗಳು

(1) ಚರ್ಚೆಯ ಸಮಯದಲ್ಲಿ ಶಿಕ್ಷಕರು ಒಬ್ಬ ಅಥವಾ ಇಬ್ಬರು ವಿದ್ಯಾರ್ಥಿಗಳು ಪ್ರಬಲರಾಗುವಂತೆ ಮಾಡಬಹುದು

(2) ಚರ್ಚೆ ವಿಷಯಾಂತರವಾಗಬಾರದು

(3) ಆರೋಗ್ಯಕರ ಚರ್ಚೆಯಾಗಬೇಕು

(4) ಏಕಕಾಲದಲ್ಲಿ ಒಬ್ಬ ವಿದ್ಯಾರ್ಥಿ ಮಾತನಾಡಲು ಅವಕಾಶ ನೀಡಬೇಕು

69. ಪಾಠಕ್ಕೆ ಪೀಠಿಕೆಯನ್ನು ನೀಡುವ ಉದ್ದೇಶ

A. ವಿದ್ಯಾರ್ಥಿಗಳ ಕಲಿಕಾ ಸಮಸ್ಯೆಗಳನ್ನು ನಿವಾರಿಸುವುದು

B. ವಿದ್ಯಾರ್ಥಿಗಳ ಪೂರ್ವಜ್ಞಾನವನ್ನು ಬಳಸುವುದು

C. ಪಾಠದ ಮುಖ್ಯಾಂಶಗಳನ್ನು ನೀಡುವುದು

D. ಕಲಿಕೆಗೆ ವಿದ್ಯಾರ್ಥಿಗಳನ್ನು ಸಿದ್ಧಪಡಿಸುವುದು

(1) A ಮತ್ತು B

(2) B ಮತ್ತು C

(3) A ಮತ್ತು D

(4) B ಮತ್ತು D



SHIKARAT.COM

70. ಬೋಧನೆ ಮತ್ತು ಕಲಿಕೆಯ ಪ್ರಕ್ರಿಯೆಯನ್ನು ಉತ್ತಮಪಡಿಸುವ ಮೌಲ್ಯಮಾಪನ
(1) ರೂಪಣಾತ್ಮಕ ಮೌಲ್ಯಮಾಪನ
(2) ಸಂಕಲನಾತ್ಮಕ ಮೌಲ್ಯಮಾಪನ
(3) ನೈದಾನಿಕ ಮೌಲ್ಯಮಾಪನ
(4) ಸಾಧನೆ ಮೌಲ್ಯಮಾಪನ

71. ತರಗತಿಯಲ್ಲಿ ಘಟಕ ಪರೀಕ್ಷೆಯನ್ನು ಮಾಡುವುದು ಇದರ ಉದ್ದೇಶವಲ್ಲ.
(1) ಕಲಿಕೆಯಲ್ಲಿನ ಪ್ರಗತಿಯನ್ನು ಮೌಲ್ಯಮಾಪನ ಮಾಡುವುದು
(2) ಬೋಧನೆಯ ಮಟ್ಟವನ್ನು ಅರ್ಥಮಾಡಿಕೊಳ್ಳುವುದು
(3) ಕಲಿಕೆಯಲ್ಲಿನ ಕ್ಲಿಷ್ಟತೆಗಳನ್ನು ಅರ್ಥಮಾಡಿಕೊಳ್ಳುವುದು
(4) ವಿದ್ಯಾರ್ಥಿಗಳಿಗೆ ಮುಂದಿನ ತರಗತಿಗೆ ಬಡ್ತಿ ನೀಡುವುದು

72. ಈ ಉದ್ದೇಶಕ್ಕೆ ಸಂಬಂಧಿಸಿದಂತೆ ಹೆಚ್ಚು ಪ್ರಶ್ನೆಗಳಿದ್ದರೆ ಪರೀಕ್ಷೆಯು ಕ್ಲಿಷ್ಟವಾಗುತ್ತದೆ
(1) ಜ್ಞಾನ
(2) ತಿಳುವಳಿಕೆ
(3) ಅನ್ವಯ
(4) ಕೌಶಲ

73. ವಿದ್ಯಾರ್ಥಿಗಳು ಜ್ಞಾನವನ್ನು ಅನ್ವಯ ಮಾಡಿಕೊಳ್ಳುವಂತೆ ಮಾಡುವ ಬೋಧನೆಯ ಹಂತ
(1) ತೊಡಗಿಸಿಕೊಳ್ಳುವಿಕೆ
(2) ಆವಿಷ್ಕರಿಸು
(3) ವಿವರಿಸು
(4) ವಿಸ್ತಾರಗೊಳಿಸು

74. ಸಮಗ್ರ ಮೌಲ್ಯಮಾಪನದಲ್ಲಿ 'ಸಮಗ್ರ' ಎಂಬುದು ಇದನ್ನು ಒಳಗೊಂಡಿರುವುದಿಲ್ಲ.
(1) ವಿವಿಧ ರೀತಿಯ ಪ್ರಶ್ನೆಗಳು
(2) ವಿವಿಧ ರೀತಿಯ ಬೋಧನಾ ವಿಧಾನಗಳು
(3) ವಿವಿಧ ರೀತಿಯ ಉದ್ದೇಶಗಳು
(4) ವಿವಿಧ ರೀತಿಯ ಪರೀಕ್ಷೆಗಳು

75. ಒಬ್ಬ ಶಿಕ್ಷಕರು ತರಗತಿಯಲ್ಲಿ ವಿವಿಧ ಬೋಧನಾ ವಿಧಾನಗಳನ್ನು ಬಳಸುತ್ತಿದ್ದಾರೆ. ಅವರು ಇದಕ್ಕೆ ಸಂಬಂಧಿಸಿದ ಸಮಸ್ಯೆಯನ್ನು ಪರಿಹರಿಸಿಕೊಳ್ಳುತ್ತಿದ್ದಾರೆ
(1) ಆಶಿಸ್ತು
(2) ಸಂವೇಗಗಳು
(3) ವೈಯಕ್ತಿಕ ಭಿನ್ನತೆಗಳು
(4) ಮರೆವು

76. ''ಪರೀಕ್ಷೆ ಮುಗಿದ ತಕ್ಷಣ ವಿದ್ಯಾರ್ಥಿಗಳು ಹಿಮ್ಮಾಹಿತಿ ಪಡೆಯಬೇಕು'' ಎಂಬುದನ್ನು ಪ್ರತಿಪಾದಿಸಿರುವ ಕಲಿಕೆಯ ನಿಯಮ
(1) ಸಿದ್ಧತಾ ನಿಯಮ
(2) ಪರಿಣಾಮ ನಿಯಮ
(3) ಉಪಯೋಗಿಸುವ ನಿಯಮ
(4) ಉಪಯೋಗಿಸದ ನಿಯಮ

77. ವಿದ್ಯಾರ್ಥಿಗಳ ವರ್ತನೆಯಲ್ಲಿ ಶಾಶ್ವತ ಬದಲಾವಣೆಗಳನ್ನು ಉಂಟುಮಾಡುವುದು ಈ ಕಲಿಕೆ
(1) ಒಳನೋಟ
(2) ಕ್ರಿಯಾಜನ್ಯ ಅನುಬಂಧ
(3) ಸೋಪಾಧಿಕ (ಶಾಸ್ತ್ರೀಯ) ಅನುಬಂಧ
(4) ಪ್ರಯತ್ನ ಮತ್ತು ದೋಷ



SHIKARAT.COM

78. ಮಾದರಿ ನಿರ್ಮಾಣ, ವೀಕ್ಷಣೆ ಮತ್ತು ಅನುಕರಣೆ – ಇವು ಈ ಕೆಳಗಿನ ಕಲಿಕೆಯ ಮೂರು ಮುಖ್ಯ ಅಂಶಗಳು

(1) ಪ್ರಯತ್ನ ಮತ್ತು ದೋಷ ಕಲಿಕೆ
(2) ಸಾಮಾಜಿಕ ಕಲಿಕೆ
(3) ಕ್ರಿಯಾಜನ್ಯ ಅನುಬಂಧ ಕಲಿಕೆ
(4) ಒಳನೋಟ ಕಲಿಕೆ

79. ಒಬ್ಬ ಶಿಕ್ಷಕ ಶಾಲೆಗೆ ಮಗುವನ್ನು ದಾಖಲು ಮಾಡಿಕೊಳ್ಳುವಾಗ ಮಗುವಿನ ವಯಸ್ಸಿನ ಬಗ್ಗೆ ವಿಚಾರಣೆ ಮಾಡುತ್ತಿದ್ದಾರೆ. ಅವರು ಈ ಕೆಳಗಿನ ಅಂಶಕ್ಕೆ ಆದ್ಯತೆಯನ್ನು ನೀಡುತ್ತಿದ್ದಾರೆ

(1) ಜ್ಞಾನ
(2) ಬುದ್ಧಿಶಕ್ತಿ
(3) ಪರಿಪಕ್ವತೆ (ಪಕ್ವತೆ-Maturity)
(4) ಅನುಭವ

80. ಈ ಕೆಳಗಿನವುಗಳಲ್ಲಿ ಅನುವಂಶೀಯತೆಯ ನಿಯಂತ್ರಣದಲ್ಲಿದ್ದು ಕಲಿಕೆಯ ಮೇಲೆ ಪ್ರಭಾವ ಬೀರುವ ಅಂಶಗಳು

A. ಅಭಿಪ್ರೇರಣೆ
B. ಬುದ್ಧಿಶಕ್ತಿ
C. ಮನೋಧೋರಣೆ
D. ಪರಿಪಕ್ವತೆ

(1) A ಮತ್ತು B
(2) B ಮತ್ತು C
(3) B ಮತ್ತು D
(4) A ಮತ್ತು D

81. ಅಭಿಪ್ರೇರಣೆ ಅವಲಂಬಿತವಾಗಿರುವುದು ಈ ಅಂಶದ ಮೇಲೆ

(1) ಅವಶ್ಯಕತೆ
(2) ತೃಪ್ತಿ
(3) ಆಸಕ್ತಿ
(4) ಅನುಭವ

82. ಒಂದು ಪರೀಕ್ಷೆ ಏನನ್ನು ಪರೀಕ್ಷಿಸಬೇಕೋ ಅದನ್ನು ಪರೀಕ್ಷಿಸಿದರೆ ಆ ಪರೀಕ್ಷೆ ಒಳಗೊಂಡಿರುವ ಲಕ್ಷಣ

(1) ವಸ್ತುನಿಷ್ಠತೆ
(2) ವಿಶ್ವಸನೀಯತೆ
(3) ಸಮಂಜಸತೆ
(4) ಪ್ರಾಯೋಗಿಕತೆ

83. ADHDಯೊಂದಿಗೆ ಸಂಬಂಧಿಸದ ವರ್ತನೆಯೆಂದರೆ

(1) ಅವಧಾನ ಕೊರತೆ
(2) ಹೆಚ್ಚು ಸಕ್ರಿಯ
(3) ಸಾಮಾಜಿಕ ಸನ್ನಿವೇಶಕ್ಕೆ ಬದ್ಧರಾಗುವುದು
(4) ಚಡಪಡಿಕೆ

84. 4 ವರ್ಷದ ಮಗುವು ಉತ್ತಮ ಕವನ ಬರೆಯುವುದು ಇದರ ಸಂಕೇತವಾಗಿದೆ

(1) ಪ್ರತಿಕೂಲರು
(2) ಅವಕಾಶವಂಚಿತರು
(3) ಪ್ರತಿಭಾನ್ವಿತರು
(4) ರೂಢಿಗತರು



SHIKARAT.COM

85. ಕೆಳಗಿನವುಗಳಲ್ಲಿ ತಾರುಣ್ಯಾವಸ್ಥೆಯ ವಿಕಾಸ ಸಂಬಂಧ ಕಾರ್ಯ

(1) ಸಮಾನ ವಯಸ್ಕರ ಗುಂಪಿಗೆ ಹೆಚ್ಚು ಆದ್ಯತೆ ನೀಡುವುದು

(2) ಮದುವೆ ಮತ್ತು ಕೌಟುಂಬಿಕ ಜೀವನಕ್ಕೆ ತಯಾರಿ

(3) ಸಮಾರಂಭಗಳಲ್ಲಿ ಭಾಗವಹಿಸಲು ಇಚ್ಛಿಸುವುದು

(4) ನಾಯಕತ್ವ ಗುಣ ಬೆಳೆಸಿಕೊಳ್ಳುವುದು

86. ಸೈಕಲ್ ಚಲಾಯಿಸುವುದನ್ನು ಕಲಿತ ನಂತರ ಬೈಕ್ ಚಲಾಯಿಸುವುದು ಸುಲಭವಾಗುತ್ತದೆ. ಇದಕ್ಕೆ ಕಾರಣ

(1) ಕಲಿಕೆಯ ಧನಾತ್ಮಕ ವರ್ಗಾವಣೆ

(2) ಕಲಿಕೆಯ ಋಣಾತ್ಮಕ ವರ್ಗಾವಣೆ

(3) ಕಲಿಕೆಯ ಶೂನ್ಯ ವರ್ಗಾವಣೆ

(4) ಕಲಿಕೆಯ ಪಾರ್ಶ್ವ ವರ್ಗಾವಣೆ

87. ವಿಭಿನ್ನ ಸಾಂಸ್ಕೃತಿಕ ಹಿನ್ನಲೆಯ ವಿದ್ಯಾರ್ಥಿಗಳು ಒಂದು ಸಾಮಾನ್ಯ ಗುರಿಯನ್ನು ತಲುಪಲು ಯೋಜನೆಯ ವಿವಿಧ ಭಾಗಗಳನ್ನು ಮಾಡುವ ಮೂಲಕ ಸಹಕರಿಸುವ ತರಗತಿ.

(1) ಶಿಕ್ಷಕ ಕೇಂದ್ರಿತ ತರಗತಿ

(2) ನಿರಂಕುಶ ತರಗತಿ

(3) ಜಿಗ್ ಸಾ ತರಗತಿ

(4) ಆನ್‌ಲೈನ್ ತರಗತಿ

88. 'ಸಾಮಾನ್ಯೀಕರಣಗೊಳಿಸುವ' ಸಾಮರ್ಥ್ಯ ಸಾಮಾನ್ಯವಾಗಿ ಈ ರೀತಿಯ ವಿಕಾಸದ ಲಕ್ಷಣವಾಗಿದೆ

(1) ದೈಹಿಕ ವಿಕಾಸ

(2) ಬೌದ್ಧಿಕ ವಿಕಾಸ

(3) ಸಾಮಾಜಿಕ ವಿಕಾಸ

(4) ಸಂವೇಗಾತ್ಮಕ ವಿಕಾಸ

89. ಈ ಕೆಳಗಿನ ಸಾಮರ್ಥ್ಯ ಹೊಂದಿರುವ ವ್ಯಕ್ತಿಯನ್ನು ಸೃಜನಶೀಲ ವ್ಯಕ್ತಿ ಎಂದು ಪರಿಗಣಿಸಲಾಗುವುದು

(1) ಸಾಧನೆಯಲ್ಲಿ ಸ್ಥಿರತೆಯನ್ನು ಕಾಯ್ದುಕೊಳ್ಳುವುದು

(2) ಹೊಸ ಆಲೋಚನೆಗಳನ್ನು ಬೆಳೆಸಿಕೊಳ್ಳುವುದು

(3) ಎಲ್ಲಾ ವಿಷಯಗಳಲ್ಲಿ ಉತ್ತಮ ಅಂಕಗಳನ್ನು ಗಳಿಸುವುದು

(4) ಒಮ್ಮುಖವಾಗಿ ಆಲೋಚಿಸುವುದು

90. ಸ್ಮೃತಿಯ ಹಂತಗಳನ್ನು ಒಳಗೊಂಡ ಸರಿಯಾದ ಕ್ರಮ

(1) ಸ್ಮರಣೆ, ಗುರ್ತಿಸುವಿಕೆ, ದಾಖಲಿಸುವಿಕೆ, ಧಾರಣೆ

(2) ಧಾರಣೆ, ದಾಖಲಿಸುವಿಕೆ, ಸ್ಮರಣೆ, ಗುರ್ತಿಸುವಿಕೆ

(3) ದಾಖಲಿಸುವಿಕೆ, ಧಾರಣೆ, ಗುರ್ತಿಸುವಿಕೆ, ಸ್ಮರಣೆ

(4) ದಾಖಲಿಸುವಿಕೆ, ಧಾರಣೆ, ಸ್ಮರಣೆ, ಗುರ್ತಿಸುವಿಕೆ



SHIKARAT.COM

## KANNADA MEDIUM
## PART – IV
### ಸಮಾಜ ವಿಜ್ಞಾನ

**91.** ಯಜ್ಞ ಆಚರಣೆಯ ಕ್ರಮಗಳನ್ನು ವಿವರಿಸುವ ವೇದದ ಭಾಗ

(1) ಬ್ರಾಹ್ಮಣ
(2) ಸಂಹಿತ
(3) ಆರಣ್ಯಕ
(4) ಉಪನಿಷತ್ತು

**92.** 'ಬಾಲರಾಮಾಯಣ' ಮತ್ತು 'ಕರ್ಪೂರಮಂಜರಿ' ಎಂಬ ನಾಟಕಗಳನ್ನು ರಚಿಸಿದವರು

(1) ಮಹೇಂದ್ರಪಾಲ
(2) ಹೇಮಚಂದ್ರ
(3) ಭವಭೂತಿ
(4) ರಾಜಶೇಖರ

**93.** ಲಲಿತಾದಿತ್ಯ ಮುಕ್ತಾಪೀಡನ ಬಗ್ಗೆ ಮಾಹಿತಿಯನ್ನು ಒದಗಿಸುವ ಪ್ರಮುಖ ಕೃತಿಗಳು

(1) ಪೃಥ್ವಿರಾಜರಾಸೋ ಮತ್ತು ಮುದ್ರಾರಾಕ್ಷಸ
(2) ಬಾಬರ್‌ನಾಮ ಮತ್ತು ಐನ್-ಇ-ಅಕ್ಬರಿ
(3) ರಾಜತರಂಗಿಣಿ ಮತ್ತು ತಾರಿಖ್-ಇ-ಹಿಂದ್
(4) ಇಂಡಿಕಾ ಮತ್ತು ದೀಪವಂಶ

**94.** ಬ್ರಿಟಿಷ್ ಈಸ್ಟ್ ಇಂಡಿಯಾ ಕಂಪನಿಗೆ ಬಂಗಾಳದ ಮೇಲಿನ ದಿವಾನಿ ಹಕ್ಕನ್ನು ನೀಡಿದವರು

(1) ಎರಡನೇ ಷಾ ಆಲಂ
(2) ಫಾರೂಕ್ ಶಿಯಾರ್
(3) ಜಹಾಂಗೀರ್
(4) ಎರಡನೇ ಬಹದ್ದೂರ್ ಷಾ

**95.** ಈ ಕೆಳಗಿನ ಘಟನೆಗಳ ಸರಿಯಾದ ಕಾಲಾನುಕ್ರಮಣಿಕೆಯನ್ನು ಗುರುತಿಸಿ.

a. ಪೂರ್ಣಸ್ವರಾಜ್ಯದ ಘೋಷಣೆ
b. ಸೂರತ್ ಒಡಕು
c. ಬಂಗಾಳದ ವಿಭಜನೆ
d. ಚೌರಿಚೌರ ದುರಂತ

(1) c d a b
(2) c b d a
(3) a b c d
(4) d c b a



SHIKARAT.COM

96. ಗುಪ್ತರ ಕಾಲದ ಪ್ರಸಿದ್ಧ ಬೌದ್ಧ ವಿಹಾರ ಮತ್ತು ಗುಹಾಲಯಗಳು ಕಂಡುಬರುವುದು

(1) ಅಜಂತಾ ಮತ್ತು ಎಲ್ಲೋರ

(2) ದೇವಗಢ ಮತ್ತು ಸಾಂಚಿ

(3) ಸಾಂಚಿ ಮತ್ತು ಸಾರನಾಥ

(4) ಅಜಂತಾ ಮತ್ತು ಸಾಂಚಿ

97. ಕೆಳಗಿನ ಹೇಳಿಕೆಗಳನ್ನು ಓದಿರಿ ಮತ್ತು ಸರಿಯಾದ ಉತ್ತರವನ್ನು ಆಯ್ಕೆ ಮಾಡಿ.

a. ಕನ್ನಡ ಭಾಷೆಯಲ್ಲಿ ದೊರೆತಿರುವ ಮೊದಲ ಶಾಸನ ಹಲ್ಮಿಡಿ ಶಾಸನ.

b. ಇದು ಕದಂಬ ಮನೆತನಕ್ಕೆ ಸೇರಿದ ದೊರೆ ಮಯೂರವರ್ಮನ ಆಡಳಿತಾವಧಿಯಲ್ಲಿ ರಚಿತವಾಗಿದೆ.

(1) (a) ಮತ್ತು (b) ಎರಡೂ ಸರಿ

(2) (a) ಮತ್ತು (b) ಎರಡೂ ತಪ್ಪು

(3) (a) ಸರಿ ಮತ್ತು (b) ತಪ್ಪು

(4) (a) ತಪ್ಪು ಮತ್ತು (b) ಸರಿ

98. ಪಟ್ಟಿ – I ನ್ನು ಪಟ್ಟಿ – II ರೊಂದಿಗೆ ಹೊಂದಿಸಿ ಮತ್ತು ಸರಿಯಾದ ಉತ್ತರವನ್ನು ಆಯ್ಕೆ ಮಾಡಿ.

| ಪಟ್ಟಿ – I | ಪಟ್ಟಿ – II |
|---|---|
| a. ರಾವಿ | i. ಅಸಿಕ್ನೀ |
| b. ಚೇನಾಬ್ | ii. ಶುತುದ್ರಿ |
| c. ಬಿಯಾಸ್ | iii. ಪರುಷ್ಣೀ |
| d. ಸಟ್ಲೇಜ್ | iv. ವಿಪಾಶಾ |

| | a | b | c | d |
|---|---|---|---|---|
| (1) | iii | iv | i | ii |
| (2) | iii | i | iv | ii |
| (3) | ii | iv | i | iii |
| (4) | ii | i | iii | iv |

99. 1919 ರ ಕಾಯ್ದೆಗೆ ಸಂಬಂಧಿಸಿದ ಸರಿಯಾದ ಆಯ್ಕೆ

(1) ಕೇಂದ್ರದಲ್ಲಿ ದ್ವಿಸರ್ಕಾರ ಸ್ಥಾಪನೆ

(2) ಭಾರತೀಯ ರಿಸರ್ವ್ ಬ್ಯಾಂಕ್ ಸ್ಥಾಪನೆ

(3) ಪ್ರಾಂತ್ಯಗಳಲ್ಲಿ ದ್ವಿಸರ್ಕಾರ ಪದ್ಧತಿಗೆ ಅವಕಾಶ

(4) ಪ್ರಾಂತ್ಯಗಳಲ್ಲಿ ಶಾಸನಸಭೆಗಳ ಸದಸ್ಯರ ಸಂಖ್ಯೆಗಳನ್ನು ಹೆಚ್ಚಿಸಲಾಯಿತು

100. 'ತೀನ್ ಮೂರ್ತಿ ಹೈಫಾ ಚೌಕ್' ಸಂಬಂಧಿಸಿರುವುದು

(1) ಮೈಸೂರು, ಪುಣೆ ಮತ್ತು ಉದಯಪುರ ಲ್ಯಾನ್ಸರ್ಸ್

(2) ಸತಾರ, ಜೋಧ್‌ಪುರ ಮತ್ತು ಪುಣೆ ಲ್ಯಾನ್ಸರ್ಸ್

(3) ದೆಹಲಿ, ಹೈದರಾಬಾದ್ ಮತ್ತು ಜೈಪುರ ಲ್ಯಾನ್ಸರ್ಸ್

(4) ಮೈಸೂರು, ಜೋಧ್‌ಪುರ ಮತ್ತು ಹೈದರಾಬಾದ್ ಲ್ಯಾನ್ಸರ್ಸ್

101. ಎರಡನೇ ಆಂಗ್ಲೋ–ಮೈಸೂರು ಯುದ್ಧವು ಕೊನೆಗೊಂಡ ಒಪ್ಪಂದ

(1) ಮದ್ರಾಸ್
(2) ಮಂಗಳೂರು
(3) ಶ್ರೀರಂಗಪಟ್ಟಣ
(4) ಬೆಸ್ಸೀನ್

102. 'ಸರಾಯ್‌ಘಾಟ್ ಸಂಗ್ರಾಮ'ವು ಇವರ ನಡುವೆ ನಡೆಯಿತು

(1) ಮೊಘಲರು ಮತ್ತು ಅಹೋಮರು

(2) ಮೊಘಲರು ಮತ್ತು ರಜಪೂತರು

(3) ವಿಜಯನಗರ ಮತ್ತು ಬಹಮನಿ ಸುಲ್ತಾನರು

(4) ಮರಾಠರು ಮತ್ತು ಹೈದರಾಬಾದ್ ನಿಜಾಮರು

103. ಸಂಸತ್ತಿನ ರಚನೆಗೆ ಅವಕಾಶ ಕಲ್ಪಿಸಿರುವ ಸಂವಿಧಾನದ ವಿಧಿ

(1) 352
(2) 324
(3) 52
(4) 79



SHIKARAT.COM

104. ಭಾರತದ ಸರ್ವೋಚ್ಚ ನ್ಯಾಯಾಲಯವು ಅಸ್ತಿತ್ವಕ್ಕೆ ಬಂದದ್ದು

(1) ನವೆಂಬರ್ 28, 1949
(2) ಜನವರಿ 28, 1950
(3) ಜನವರಿ 26, 1950
(4) ಜನವರಿ 25, 1950

105. ವಿಶ್ವಸಂಸ್ಥೆಯ ಸ್ಥಾಪನೆಗೆ ಕಾರಣರಾದ ನಾಯಕರ ಸರಿಯಾದ ಗುಂಪು

(1) ಜಾರ್ಜ್ ವಾಷಿಂಗ್‌ಟನ್, ಲೆನಿನ್ ಮತ್ತು ಜೋಸೆಫ್ ಸ್ಟಾಲಿನ್
(2) ಜಾನ್ ಎಫ್. ಕೆನಡಿ, ವಿನ್‌ಸ್ಟನ್ ಚರ್ಚಿಲ್ ಮತ್ತು ಲೆನಿನ್
(3) ಜಾರ್ಜ್ ವಾಷಿಂಗ್‌ಟನ್, ಜೋಸೆಫ್ ಸ್ಟಾಲಿನ್ ಮತ್ತು ವಿನ್‌ಸ್ಟನ್ ಚರ್ಚಿಲ್
(4) ವಿನ್‌ಸ್ಟನ್ ಚರ್ಚಿಲ್, ಜೋಸೆಫ್ ಸ್ಟಾಲಿನ್ ಮತ್ತು ಎಫ್.ಡಿ. ರೂಸ್‌ವೆಲ್ಟ್

106. ಆಹಾರ ಮತ್ತು ಕೃಷಿ ಸಂಸ್ಥೆಯ ಪ್ರಧಾನ ಕಛೇರಿ ಇರುವುದು

(1) ಜಿನೇವಾ
(2) ರೋಮ್
(3) ಪ್ಯಾರಿಸ್
(4) ನ್ಯೂಯಾರ್ಕ್

107. 1971 ರಲ್ಲಿ '20 ವರ್ಷಗಳ ಶಾಂತಿ, ಮೈತ್ರಿ ಹಾಗೂ ಸಹಕಾರ ಒಪ್ಪಂದಕ್ಕೆ' ಸಹಿ ಹಾಕಿದ ದೇಶಗಳು

(1) ಭಾರತ ಮತ್ತು ರಷ್ಯಾ
(2) ಭಾರತ ಮತ್ತು ಚೀನಾ
(3) ಭಾರತ ಮತ್ತು ಪಾಕಿಸ್ತಾನ
(4) ಭಾರತ ಮತ್ತು ಶ್ರೀಲಂಕಾ

108. ಕೆಳಗಿನ ಹೇಳಿಕೆಗಳನ್ನು ಓದಿರಿ ಮತ್ತು ಸರಿಯಾದ ಉತ್ತರವನ್ನು ಆಯ್ಕೆ ಮಾಡಿ.
ಮೂಲಭೂತ ಕರ್ತವ್ಯಗಳನ್ನು 1976 ರಲ್ಲಿ

a. ನಮ್ಮ ಸಂವಿಧಾನದ 42 ರ ತಿದ್ದುಪಡಿಯಲ್ಲಿ ಮೂಲಭೂತ ಕರ್ತವ್ಯಗಳನ್ನು 1976 ರಲ್ಲಿ ಅಳವಡಿಸಲಾಗಿದೆ.
b. ಸಂವಿಧಾನದ ಪರಿಚ್ಛೇದ 51(A) ರಲ್ಲಿ ಮೂಲಭೂತ ಕರ್ತವ್ಯಗಳು ಸೇರಿಸಲ್ಪಟ್ಟಿವೆ.

(1) (a) ಮತ್ತು (b) ಎರಡೂ ಸರಿ
(2) (a) ಮತ್ತು (b) ಎರಡೂ ತಪ್ಪು
(3) (a) ಸರಿ ಆದರೆ (b) ತಪ್ಪು
(4) (a) ತಪ್ಪು ಆದರೆ (b) ಸರಿ



SHIKARAT.COM

109. ಭಾರತದ ಪೌರತ್ವ ಕಾಯಿದೆ ಜಾರಿಗೆ ಬಂದ ವರ್ಷ

(1) 1986
(2) 1956
(3) 1955
(4) 1950

110. ಭಾರತದ ವಾಯುಪಡೆಗೆ ತರಬೇತಿ ನೀಡುವ ಪ್ರಮುಖ ಕೇಂದ್ರಗಳು

(1) ವಂಡುರ್ತಿ ಮತ್ತು ಲೋನಾವಾಲ
(2) ಬೆಂಗಳೂರು ಮತ್ತು ಹೈದರಾಬಾದ್
(3) ಡೆಹರಾಡೂನ್ ಮತ್ತು ಚೆನ್ನೈ
(4) ಪುಣೆ ಮತ್ತು ನವದೆಹಲಿ

111. ಕೆಳಗಿನ ವಾಕ್ಯಗಳನ್ನು ಓದಿರಿ ಮತ್ತು ಗ್ರಾಮ ಸಮುದಾಯದ ಲಕ್ಷಣಗಳಿಗೆ ಸಂಬಂಧಿಸಿದಂತೆ ಸರಿಯಾದ ಉತ್ತರವನ್ನು ಆಯ್ಕೆ ಮಾಡಿ.

a. ಚಿಕ್ಕಗಾತ್ರದ ಕುಟುಂಬ
b. ಸಾಮಾಜಿಕ ಐಕ್ಯತೆ
c. ಅನಾಮಿಕತೆ
d. ಸರಳತೆ

(1) (a) ಮತ್ತು (b) ಮಾತ್ರ ಸರಿ
(2) (b) ಮತ್ತು (c) ಮಾತ್ರ ಸರಿ
(3) (a) ಮತ್ತು (c) ಮಾತ್ರ ಸರಿ
(4) (b) ಮತ್ತು (d) ಮಾತ್ರ ಸರಿ

112. ಕೆಳಗಿನ ಹೇಳಿಕೆಗಳನ್ನು ಓದಿರಿ.

a. ಇವರು ಬ್ರಿಟಿಷ್ ಸಮಾಜಶಾಸ್ತ್ರಜ್ಞರು.
b. ಇವರು ಸಮಾಜದ ವಿಕಾಸವನ್ನು ಅಧ್ಯಯನ ಮಾಡಿದರು.

ಈ ಮೇಲಿನ ಹೇಳಿಕೆಗಳು ಸಂಬಂಧಿಸಿರುವುದು

(1) ಆಗಸ್ಟ್ ಕಾಮ್ಟೆ
(2) ಎಮಿಲಿ ಡರ್ಖೀಮ್
(3) ಹರ್ಬರ್ಟ್ ಸ್ಪೆನ್ಸರ್
(4) ಮ್ಯಾಕ್ಸ್ ವೇಬರ್







SHIKARAT.COM

113. ಕೆಳಗಿನ ವಾಕ್ಯಗಳನ್ನು ಓದಿರಿ.

a. ಸಾಮಾಜಿಕ ಹಾಗೂ ಆರ್ಥಿಕ ಪರಿವರ್ತನೆ.

b. ಸಮಾಜದ ಎಲ್ಲಾ ಅಂಗಗಳಲ್ಲಿಯೂ ಶ್ರಮವಿಭಜನೆ.

ಈ ಮೇಲಿನ ಲಕ್ಷಣಗಳು ಸಂಬಂಧಿಸಿರುವುದು

(1) ಬೇಟೆಯಾಡುವ ಮತ್ತು ಆಹಾರ ಸಂಗ್ರಹಿಸುವ ಸಮಾಜ

(2) ಪಶುಪಾಲನ ಸಮಾಜ

(3) ಕೃಷಿ ಸಮಾಜ

(4) ಕೈಗಾರಿಕಾ ಸಮಾಜ

114. 14 ವರ್ಷಕ್ಕೂ ಕಿರಿಯ ವಯಸ್ಸಿನ ಮಕ್ಕಳನ್ನು ದುಡಿಮೆಗೆ ನೇಮಿಸುವುದು ಶಿಕ್ಷಾರ್ಹ ಅಪರಾಧವೆಂದು ಘೋಷಿಸಿದ ನಮ್ಮ ಸಂವಿಧಾನದ ವಿಧಿ

(1) 24
(2) 21A
(3) 32
(4) 17

115. ಅಸಂಘಟಿತ ಕೆಲಸಗಾರರಿಗೆ ಉದಾಹರಣೆ

(1) ಮನೆಕೆಲಸಗಾರರು, ಬ್ಯಾಂಕ್ ನೌಕರರು ಮತ್ತು ಸೈನಿಕರು

(2) ಕೃಷಿ ಕಾರ್ಮಿಕರು, ವಾಹನ ರಿಪೇರಿ ಮಾಡುವವರು ಮತ್ತು ಮನೆಕೆಲಸಗಾರರು

(3) ಶಿಕ್ಷಕರು, ಪೊಲೀಸರು ಮತ್ತು ಕಟ್ಟಡ ನಿರ್ಮಾಣ ಕೆಲಸಗಾರರು

(4) ಬ್ಯಾಂಕ್ ನೌಕರರು, ಶಿಕ್ಷಕರು ಮತ್ತು ಪೊಲೀಸರು

116. ಸುಪ್ತ ಜ್ವಾಲಾಮುಖಿಗಳಿಗೆ ಉದಾಹರಣೆ

(1) ವೆಸೂವಿಯಸ್ ಮತ್ತು ಕಿಲಿಮಂಜರೊ

(2) ಗೊರಾಂಗೊರೊ ಮತ್ತು ಆರ್ಥರ್ ಸೀಟ್

(3) ಸ್ಟ್ರಾಂಬೋಲಿ ಮತ್ತು ಎಟ್ನಾ

(4) ಮೌನಲೋವ ಮತ್ತು ಪಿನಾಟುಬೊ



SHIKARAT.COM

117. ಒಮಣನದಿಯ ಕಣಿವೆಯುದ್ದಕ್ಕೂ ಎರಡೂ ದಡಗಳಲ್ಲಿ ಸಂಚಯನವಾಗುವ ಶಿಲಾವಸ್ತುಗಳನ್ನು ಹೀಗೆ ಕರೆಯುವರು

(1) ಅಂತ್ಯ ಶಿಲಾನಿಚಯ
(2) ಪಾರ್ಶ್ವ ಶಿಲಾನಿಚಯ
(3) ತಳದ ಶಿಲಾನಿಚಯ
(4) ಮಧ್ಯ ಶಿಲಾನಿಚಯ

118. ವಾಯುಮಂಡಲದ ಅತ್ಯಂತ ಕೆಳಪದರ

(1) ಬಾಹ್ಯಮಂಡಲ
(2) ಉಷ್ಣತಾಮಂಡಲ
(3) ಸಮೋಷ್ಣಮಂಡಲ
(4) ಪರಿವರ್ತನಾಮಂಡಲ

119. ಸಮಭಾಜಕ ವೃತ್ತದಿಂದ 5° ಉತ್ತರ ಮತ್ತು ದಕ್ಷಿಣ ಅಕ್ಷಾಂಶದವರೆಗೆ ಕಂಡುಬರುವ ಒತ್ತಡ ಪಟ್ಟಿ

(1) ಸಮಭಾಜಕ ವೃತ್ತದ ಕಡಿಮೆ ಒತ್ತಡ ಪಟ್ಟಿ
(2) ಉತ್ತರ ಉಪಉಷ್ಣವಲಯದ ಅಧಿಕ ಒತ್ತಡ ಪಟ್ಟಿ
(3) ದಕ್ಷಿಣ ಉಪಉಷ್ಣವಲಯದ ಅಧಿಕ ಒತ್ತಡ ಪಟ್ಟಿ
(4) ಉತ್ತರ ಉಪಧ್ರುವೀಯ ಕಡಿಮೆ ಒತ್ತಡ ಪಟ್ಟಿ

120. ಕೆಳಗಿನ ಹೇಳಿಕೆಗಳನ್ನು ಓದಿ ಮತ್ತು ಸರಿಯಾದ ಉತ್ತರವನ್ನು ಆಯ್ಕೆ ಮಾಡಿ.

a. ಏಷಿಯನ್ ಭೂರಾಶಿಯಲ್ಲಿ ಯುರೋಪ್ ಒಂದು ದೊಡ್ಡ ಪರ್ಯಾಯ ದ್ವೀಪ.

b. ಯುರೋಪನ್ನು 'ಪರ್ಯಾಯದ್ವೀಪಗಳ ಪರ್ಯಾಯದ್ವೀಪ' ಎಂದು ಕರೆಯಲಾಗಿದೆ.

(1) (a) ಮಾತ್ರ ಸರಿ
(2) (b) ಮಾತ್ರ ಸರಿ
(3) (a) ಮತ್ತು (b) ಎರಡೂ ಸರಿ
(4) (a) ಮತ್ತು (b) ಎರಡೂ ತಪ್ಪು



SHIKARAT.COM

121. ರಾಕಿ ಮತ್ತು ಅಲಾಸ್ಕ ಪರ್ವತ ಶ್ರೇಣಿಗಳಿರುವುದು

(1) ಏಷ್ಯಾ
(2) ಉತ್ತರ ಅಮೆರಿಕಾ
(3) ದಕ್ಷಿಣ ಅಮೆರಿಕಾ
(4) ಆಫ್ರಿಕಾ

122. ಕೆಳಗಿನ ವಾಕ್ಯಗಳನ್ನು ಓದಿರಿ.

a. ಇದು ಬಸಾಲ್ಟ್ ಶಿಲೆಯ ಶಿಥಿಲೀಕರಣದಿಂದಾಗಿದೆ.

b. ಇದು ಹೆಚ್ಚು ಮೆಗ್ನೀಷಿಯಂ, ಅಲ್ಯೂಮಿನಿಯಂ ಮತ್ತು ಕಬ್ಬಿಣದ ಆಕ್ಸೈಡ್‌ಗಳನ್ನು ಹೊಂದಿದೆ.

ಈ ಮೇಲಿನ ವಾಕ್ಯಗಳು ಸಂಬಂಧಿಸಿರುವುದು

(1) ಕಪ್ಪು ಮಣ್ಣು
(2) ಕೆಂಪು ಮಣ್ಣು
(3) ಲ್ಯಾಟರೈಟ್ ಮಣ್ಣು
(4) ಮೆಕ್ಕಲು ಮಣ್ಣು

123. ಪಶ್ಚಿಮಾಭಿಮುಖವಾಗಿ ಹರಿಯುವ ನದಿಗಳ ಸರಿಯಾದ ಗುಂಪು

(1) ಕೃಷ್ಣಾ, ಕಾವೇರಿ, ಶರಾವತಿ
(2) ಕಾವೇರಿ, ಪೆನ್ನಾರ್, ಪಾಲರ್
(3) ಶರಾವತಿ, ನೇತ್ರಾವತಿ, ವಾರಾಹಿ
(4) ಕಾಳಿ, ಮಲಪ್ರಭ, ತುಂಗಭದ್ರಾ

124. ಹಜಾರಿಭಾಗ್ ರಾಷ್ಟ್ರೀಯ ಉದ್ಯಾನವನ ಇರುವುದು

(1) ಪಶ್ಚಿಮ ಬಂಗಾಳ
(2) ಗುಜರಾತ್
(3) ಮಹಾರಾಷ್ಟ್ರ
(4) ಬಿಹಾರ

125. ಸ್ವತಂತ್ರ ಭಾರತದ ಮೊದಲ ವಿವಿಧೋದ್ದೇಶ ನದಿ ಕಣಿವೆ ಯೋಜನೆ

(1) ಭಾಕ್ರಾನಂಗಲ್
(2) ದಾಮೋದರ್
(3) ಹಿರಾಕುಡ್
(4) ನಾಗಾರ್ಜುನ ಸಾಗರ



SHIKARAT.COM

126. 'ಭಾರತಕ್ಕೆ ಯೋಜಿತ ಅರ್ಥವ್ಯವಸ್ಥೆ' ಎಂಬ ಪುಸ್ತಕವನ್ನು ಬರೆದವರು

(1) ಡಾ. ಎಂ. ಎಸ್. ಸ್ವಾಮಿನಾಥನ್
(2) ಅಮರ್ತ್ಯ ಸೇನ್
(3) ಸರ್ ಎಂ. ವಿಶ್ವೇಶ್ವರಯ್ಯ
(4) ಅಭಿಜಿತ್ ಸೇನ್

127. 'ಹಳದಿ ಕ್ರಾಂತಿ' ಸಂಬಂಧಿಸಿರುವುದು

(1) ಆಹಾರ ಧಾನ್ಯಗಳ ಉತ್ಪಾದನೆ
(2) ಎಣ್ಣೆ ಬೀಜಗಳ ಉತ್ಪಾದನೆ
(3) ಮೀನುಗಳ ಉತ್ಪಾದನೆ
(4) ಹಣ್ಣು ಮತ್ತು ಹೂವುಗಳ ಉತ್ಪಾದನೆ

128. ಪುನರ್‌ರಫ್ತು ವ್ಯಾಪಾರಕ್ಕೆ ಒಂದು ಉತ್ತಮ ಉದಾಹರಣೆ

(1) ಯು.ಎಸ್.ಎ.
(2) ರಷ್ಯಾ
(3) ಸಿಂಗಾಪುರ
(4) ಭಾರತ

129. ಪಟ್ಟಿ – I ನ್ನು ಪಟ್ಟಿ – II ರೊಂದಿಗೆ ಹೊಂದಿಸಿ ಮತ್ತು ಸರಿಯಾದ ಉತ್ತರವನ್ನು ಆಯ್ಕೆ ಮಾಡಿ.

| ಪಟ್ಟಿ – I | ಪಟ್ಟಿ – II |
|---|---|
| a. ಭೂಮಿ | i. ಲಾಭ |
| b. ಶ್ರಮ | ii. ಬಡ್ಡಿ |
| c. ಬಂಡವಾಳ | iii. ಕೂಲಿ |
| d. ಸಂಘಟನೆ | iv. ಗೇಣಿ |

| | a | b | c | d |
|---|---|---|---|---|
| (1) | i | ii | iii | iv |
| (2) | iv | iii | i | ii |
| (3) | iii | iv | i | ii |
| (4) | iv | iii | ii | i |

130. ದ್ವಿತೀಯ ವಲಯದ ಪ್ರಮುಖ ಆರ್ಥಿಕ ಚಟುವಟಿಕೆಗಳು

(1) ಕೈಗಾರಿಕೆಗಳು ಮತ್ತು ವಿದ್ಯುತ್ ಉತ್ಪಾದನೆ
(2) ಕಟ್ಟಡ ನಿರ್ಮಾಣ ಮತ್ತು ಪಶುಪಾಲನೆ
(3) ಮೀನುಗಾರಿಕೆ ಮತ್ತು ಗಣಿಗಾರಿಕೆ
(4) ಪ್ರವಾಸೋದ್ಯಮ ಮತ್ತು ಸಾರಿಗೆ



SHIKARAT.COM

131. ಕೆಳಗಿನ ಹೇಳಿಕೆಗಳನ್ನು ಓದಿರಿ ಮತ್ತು ಸರಿಯಾದ ಉತ್ತರವನ್ನು ಆಯ್ಕೆ ಮಾಡಿ.

a. ಶ್ರಮವನ್ನು ಸಂಗ್ರಹಿಸಲಾಗದು.

b. ಶ್ರಮವು ಒಂದು ಚಟುವಟಿಕೆಯ ಅಂಶವಾಗಿದೆ.

(1) (a) ಮಾತ್ರ ಸರಿ

(2) (b) ಮಾತ್ರ ಸರಿ

(3) (a) ಮತ್ತು (b) ಎರಡೂ ಸರಿ

(4) (a) ಮತ್ತು (b) ಎರಡೂ ತಪ್ಪು

132. ಮಾನವಶಕ್ತಿ ಮತ್ತು ಭೌತಿಕ ಸಂಪನ್ಮೂಲಗಳನ್ನು ಒಂದೆಡೆ ಸೇರಿಸುವ ಪ್ರಕ್ರಿಯೆ

(1) ಯೋಜನೆ

(2) ಸಂಯೋಜನೆ

(3) ನಿಯಂತ್ರಣ

(4) ಸಂಘಟನೆ

133. ಸಾಮಾನ್ಯವಾಗಿ ಒಂದು ಭೌಗೋಳಿಕ ಪ್ರದೇಶಕ್ಕೆ ಮಾತ್ರ ಸೀಮಿತವಾಗಿರುವ ಮಾರುಕಟ್ಟೆ

(1) ಸ್ಥಳೀಯ ಮಾರುಕಟ್ಟೆ

(2) ಹಣಕಾಸು ಮಾರುಕಟ್ಟೆ

(3) ಸರಕು ಮಾರುಕಟ್ಟೆ

(4) ಸಗಟು ಮಾರುಕಟ್ಟೆ

134. ಭಾರತದ ಬಹುರಾಷ್ಟ್ರೀಯ ಕಂಪನಿಗಳ ಸರಿಯಾದ ಗುಂಪು

(1) ಟಾಟಾ, ವಿಪ್ರೋ, ಫಿಲಿಪ್ಸ್

(2) ವಿಪ್ರೋ, ಬಿರ್ಲಾ, ಇನ್‌ಫೋಸಿಸ್

(3) ಹಿಂದುಸ್ಥಾನ್‌ಲಿವರ್, ಸೋನಿ, ಸ್ಯಾಮ್‌ಸಂಗ್

(4) ಕೋಕಕೋಲ, ಟಾಟಾ, ಫಿಲಿಪ್ಸ್

135. ವಿಶ್ವ ಗ್ರಾಹಕರ ದಿನವನ್ನು ಆಚರಿಸುವುದು

(1) ಜೂನ್ 5 (2) ಡಿಸೆಂಬರ್ 10 (3) ಮಾರ್ಚ್ 15 (4) ಮಾರ್ಚ್ 8

136. 'ಈಜಿಪ್ಟ್ ಮತ್ತು ಮೆಸಪೊಟೇಮಿಯಾದ ಫಲವತ್ತಾದ ಕಣಿವೆಗಳಲ್ಲಿ ನಾಗರಿಕತೆಗಳು ಬೆಳೆದುಬಂದವು.' ಈ ಹೇಳಿಕೆಯು ಈ ಎರಡು ಬೋಧನಾ ವಿಷಯಗಳ ಸಹಸಂಬಂಧವಾಗಿದೆ

(1) ಇತಿಹಾಸ ಮತ್ತು ಸಾಹಿತ್ಯ

(2) ಇತಿಹಾಸ ಮತ್ತು ಭೂಗೋಳ

(3) ಇತಿಹಾಸ ಮತ್ತು ಅರ್ಥಶಾಸ್ತ್ರ

(4) ಇತಿಹಾಸ ಮತ್ತು ಪೌರನೀತಿ



SHIKARAT.COM

137. ಅನುಗಮನ ಮತ್ತು ನಿಗಮನ ಪದ್ಧತಿಗಳ ಬಳಕೆಯು ಈ ಕೆಳಗಿನ ಒಂದು ಕೌಶಲ್ಯಕ್ಕೆ ಸಂಬಂಧಿಸಿದೆ

(1) ಪ್ರಚೋದನಾ ಬದಲಾವಣೆಯ ಕೌಶಲ್ಯ

(2) ವಿವರಣಾ ಕೌಶಲ್ಯ

(3) ಉದಾಹರಣೆಗಳೊಂದಿಗೆ ದೃಷ್ಟಾಂತಿಸುವ ಕೌಶಲ್ಯ

(4) ಪಾಠ ಪರಿಚಯಿಸುವ ಕೌಶಲ್ಯ

138. ಇದು ಸಾಮಾಜಿಕ ಅಧ್ಯಯನಗಳಲ್ಲಿ ಉತ್ತಮ ಶೈಕ್ಷಣಿಕ ಮೌಲ್ಯವನ್ನು ಹೊಂದಿರುವ ಐತಿಹಾಸಿಕ, ಭೌಗೋಳಿಕ, ವೈಜ್ಞಾನಿಕ ಮತ್ತು ಸಾಂಸ್ಕೃತಿಕ ಪ್ರಾಮುಖ್ಯತೆಯ ನೈಜ ವಸ್ತುಗಳನ್ನು ಒಳಗೊಂಡಿದೆ

(1) ಚರ್ಚೆಗಳು
(2) ವಸ್ತುಸಂಗ್ರಹಾಲಯಗಳು
(3) ನಾಟಕೀಕರಣ
(4) ಮಾದರಿಗಳು

139. ಸಮಸ್ಯೆಗೆ ಪರಿಹಾರಗಳನ್ನು ನೀಡಿ, ಬೋಧನೆ ಮತ್ತು ಕಲಿಕೆಯಲ್ಲಿ ಸುಧಾರಣೆಯನ್ನು ತರುವುದು ಇದರ ಪ್ರಮುಖ ಉದ್ದೇಶವಾಗಿದೆ

(1) ಅನ್ವಯಿಕ ಸಂಶೋಧನೆ
(2) ವಿವರಣಾತ್ಮಕ ಸಂಶೋಧನೆ
(3) ಕ್ರಿಯಾಸಂಶೋಧನೆ
(4) ಸಹಸಂಬಂಧ ಸಂಶೋಧನೆ

140. ಶಾಲೆಯನ್ನು ಸಮುದಾಯದೆಡೆಗೆ ತೆಗೆದುಕೊಂಡು ಹೋಗಲು ಈ ಕೆಳಗಿನ ಕಾರ್ಯಕ್ರಮವನ್ನು ಕೈಗೊಳ್ಳಬಹುದು

(1) ಸಮುದಾಯದ ಸಮೀಕ್ಷೆ

(2) ಶಿಕ್ಷಕ–ಪೋಷಕರ ಸಂಘ

(3) ಸಮಾಜದ ಹೆಸರಾಂತ ವ್ಯಕ್ತಿಗಳ ಆಹ್ವಾನ

(4) ವಿಚಾರಸಂಕಿರಣಗಳು

141. ಈ ವಿಧಾನದಲ್ಲಿ ವಿದ್ಯಾರ್ಥಿಯು ಸಾರ್ವತ್ರೀಕರಣದಿಂದ ನಿರ್ದಿಷ್ಟತೆ ಕಡೆಗೆ ಮತ್ತು ಅಮೂರ್ತದಿಂದ ಮೂರ್ತದ ಕಡೆಗೆ ಸಾಗುತ್ತಾನೆ

(1) ಅನುಗಮನ ವಿಧಾನ
(2) ಸಮಸ್ಯೆ ಪರಿಹಾರ ವಿಧಾನ
(3) ನಿಗಮನ ವಿಧಾನ
(4) ಅನುಕ್ರಮ ವಿಧಾನ



SHIKARAT.COM

142. ಅನುಭವಾತ್ಮಕ ಕಲಿಕೆಯ ಮೂಲ ಪರಿಕಲ್ಪನೆಯನ್ನು ಪರಿಚಯಿಸಿದವರು

(1) ಸ್ಟೀಫನ್ ಬ್ರುಕ್‌ಫೀಲ್ಡ್
(2) ಡೇವಿಡ್ ಎ. ಕೋಲ್ಬ್
(3) ಲೀವ್ ವೈಗಾಟ್‌ಸ್ಕಿ
(4) ಜೀನ್ ಪಿಯಾಜೆ

143. ವಿಷಯದ ಬಗ್ಗೆ ವಿಚಾರಣೆ ಆಧಾರಿತ ತನಿಖೆ ನಡೆಸಲು ವಿದ್ಯಾರ್ಥಿಗಳಿಗೆ ಅವಕಾಶವನ್ನು ಒದಗಿಸುವುದು 5'E' ಮಾದರಿಯ ಈ ಹಂತದ ಉದ್ದೇಶವಾಗಿದೆ

(1) ಪರಿಶೋಧನೆ
(2) ವಿವರಣೆ
(3) ವಿಸ್ತೃತ
(4) ಮೌಲ್ಯಮಾಪನ

144. ಇದು ಸಮಾಜ ವಿಜ್ಞಾನ ಪಠ್ಯಪುಸ್ತಕದ ಉತ್ತಮ ಲಕ್ಷಣವಲ್ಲ

(1) ನೈತಿಕ ಮೌಲ್ಯಗಳನ್ನು ಬೆಳೆಸುವಂತಿರಬೇಕು
(2) ಭಾಷೆ ಮತ್ತು ಶೈಲಿ ಕಠಿಣವಾಗಿರಬೇಕು
(3) ಮುಖಪುಟವು ಆಕರ್ಷಕವಾಗಿರಬೇಕು
(4) ಉದಾಹರಣೆಗಳನ್ನು ಹಾಗೂ ಚಿತ್ರಪಟಗಳನ್ನು ಒಳಗೊಂಡಿರಬೇಕು

145. ಪಾಠ ಯೋಜನೆಯ ಈ ಹಂತವು ಬೋಧನಾ ವಿಧಾನ ಪರಿಣಾಮಕಾರಿಯಾಗಿ ಮತ್ತು ಯಶಸ್ವಿಯಾಗಿದೆಯೇ ಅಥವಾ ಇಲ್ಲವೇ ಎಂಬುದನ್ನು ಕಂಡುಹಿಡಿಯಲು ಶಿಕ್ಷಕರಿಗೆ ಸಹಾಯಮಾಡುವುದು

(1) ಪೀಠಿಕೆ
(2) ಉದ್ದೇಶ ನಿರೂಪಣೆ
(3) ಪಾಠದ ಬೆಳವಣಿಗೆ
(4) ಪುನರಾವರ್ತನೆ

146. 'ವಿವಿಧ ಪರ್ಯಾಯಗಳನ್ನು ಆಲೋಚಿಸುವುದು' ಈ ಬೋಧನಾ ಮಾದರಿಯ ಒಂದು ಹಂತವಾಗಿದೆ

(1) 5'E' ಮಾದರಿ
(2) ನಿರ್ಣಯ ಕೈಗೊಳ್ಳುವ ಮಾದರಿ
(3) ಅನುಭವಾತ್ಮಕ ಕಲಿಕಾ ಮಾದರಿ
(4) ಸಹಕಾರ ಕಲಿಕಾ ಮಾದರಿ



SHIKARAT.COM

147. ''ಅಣುಬೋಧನೆಯು ತರಬೇತಿ ತಂತ್ರವಾಗಿದ್ದು, ವಿದ್ಯಾರ್ಥಿ–ಶಿಕ್ಷಕರು ನಿರ್ದಿಷ್ಟ ಪರಿಕಲ್ಪನೆಯನ್ನು ನಿರ್ದಿಷ್ಟ ಕೌಶಲ್ಯವನ್ನು ಬಳಸಿ, ಕಡಿಮೆ ಸಂಖ್ಯೆಯ ವಿದ್ಯಾರ್ಥಿಗಳಿಗೆ ಕಡಿಮೆ ಅವಧಿಯಲ್ಲಿ ಬೋಧಿಸುವುದಾಗಿದೆ.'' ಎಂದು ವ್ಯಾಖ್ಯಾನಿಸಿದವರು

(1) ಎಂ. ಬಿ. ಬುಚ್
(2) ಡಿ. ಡಬ್ಲ್ಯು. ಅಲೆನ್
(3) ಬಿ. ಕೆ. ಪಾಸ್ಸಿ
(4) ಎನ್. ಕೆ. ಜಾಂಗಿರಾ ಮತ್ತು ಅಜಿತ್ ಸಿಂಗ್

148. ಕಲಿಕೆಯಲ್ಲಿನ ಕುಂದುಕೊರತೆಗಳನ್ನಾಗಲಿ ಅಥವಾ ಸಮಸ್ಯೆಗಳನ್ನಾಗಲಿ ಕಂಡುಹಿಡಿಯುವ ಪರೀಕ್ಷೆಯೇ

(1) ಮೌಖಿಕ ಪರೀಕ್ಷೆ
(2) ಸಾಧನಾ ಪರೀಕ್ಷೆ
(3) ನೈದಾನಿಕ ಪರೀಕ್ಷೆ
(4) ಘಟಕ ಪರೀಕ್ಷೆ

149. ಪಟ್ಟಿ – I ನ್ನು ಪಟ್ಟಿ – II ರೊಂದಿಗೆ ಹೊಂದಿಸಿ ಮತ್ತು ಸರಿಯಾದ ಉತ್ತರವನ್ನು ಆಯ್ಕೆ ಮಾಡಿ.

| ಪಟ್ಟಿ – I | ಪಟ್ಟಿ – II |
|---|---|
| a. ಜ್ಞಾನ | i. ವಿವರಿಸುವನು |
| b. ತಿಳುವಳಿಕೆ | ii. ವಿಮರ್ಶಿಸುವನು |
| c. ಅನ್ವಯ | iii. ತಯಾರಿಸುವನು |
| d. ಕೌಶಲ್ಯ | iv. ಸ್ಮರಿಸುವನು |

| | a | b | c | d |
|---|---|---|---|---|
| (1) | i | ii | iii | iv |
| (2) | ii | iii | iv | i |
| (3) | iii | iv | i | ii |
| (4) | iv | i | ii | iii |

150. ಅಮೂರ್ತ ಪರಿಕಲ್ಪನೆ ಮತ್ತು ಪ್ರತಿಫಲಿತ ವೀಕ್ಷಣೆಯೆಂಬ ಕಲಿಕಾ ಲಕ್ಷಣಗಳನ್ನು ಹೊಂದಿರುವುದು

(1) ಒಮ್ಮುಖದಾರ
(2) ದಿಕ್ಚ್ಯುತಿಗೊಳಿಸುವವ
(3) ಸಮೀಕರಿಸುವವ
(4) ದಾಣಿಕೆದಾರ



SHIKARAT.COM